**ಶಿಕ್ಷಣ ಹಕ್ಕು ಕಾಯಿದೆ 2009ರ ಅನುಷ್ಠಾನದಲ್ಲಿ ಎಸ್‌ಡಿಎಂಸಿಗಳು ಮತ್ತು ಸ್ಥಳೀಯ ಸರಕಾರಗಳು**

# ಜಾಗೃತಿ ಅಭಿಯಾನ – 2020–2023






**ಸಂಚಿಕೆ: 1** ಖಾಸಗಿ ಪ್ರಸಾರಕ್ಕಾಗಿ ಮಾತ್ರ

# ಪಡಿ ಸುದ್ದಿ ಪತ್ರ – ಶಿಕ್ಷಣ ಸಂಚಲನ

## ಎಪ್ರಿಲ್ 2020 – ಮಾರ್ಚ್ 2021


**ಪ್ರಕಟಣೆ:**
ದಾಖಲಾತಿ ವಿಭಾಗ,
ಪಡಿ, ಮಂಗಳೂರು

**ಸಲಹೆ ಮತ್ತು ಸಹಕಾರ:**
ರೆನ್ನಿ ಡಿಸೋಜ, ನಿರ್ದೇಶಕರು
ಹಾಗೂ ಪಡಿ ಬಳಗ


**ವಿಆಶ:**
ಗುಣಾತ್ಮಕ ಶಿಕ್ಷಣಕ್ಕಾಗಿ ಮಕ್ಕಳ ಸ್ನೇಹಿ ಸಮಾಜ ನಿರ್ಮಾಣ


ಪಡಿ, ಗಣೇಶ ಬಿಲ್ಡಿಂಗ್,
ಮೊದಲನೆ ಮಹಡಿ,
2ನೇ ಅಡ್ಡರಸ್ತೆ,
ಲೋವರ್ ಬೆಂದೂರ್,
ಮಂಗಳೂರು–575 002


**ಹೆಚ್ಚಿನ ಮಾಹಿತಿಗಾಗಿ ಸಂದರ್ಶಿಸಿ:**
www.padivalored.com


"ಶಿಕ್ಷಣವೇ ಶಕ್ತಿ" ಶಿಕ್ಷಣದ ಪ್ರಕ್ರಿಯೆಯಲ್ಲಿ ಸಮುದಾಯದ ಭಾಗವಹಿಸುವಿಕೆ ಹಾಗೂ ಮಗುಸ್ನೇಹಿ ಸ್ಥಳೀಯ ಆಡಳಿತದಿಂದ ನಾಡಿನ ಪ್ರತಿಯೊಂದು ಮಗುವಿನ ಶಿಕ್ಷಣ ಖಾತರಿಯಾಗುವುದೆಂಬ ವಿಶ್ವಾಸದಿಂದ 2020–23 ಸಾಲಿನಲ್ಲಿ ಪ್ರಮುಖ ಮೂರು ಪರಿಕಲ್ಪನೆಯೊಂದಿಗೆ ಪಡಿ ಸಂಸ್ಥೆಯು ಕಾರ್ಯ ಯೋಜನೆಯನ್ನು ಆರಂಭಗೊಳಿಸಿತ್ತು. ಮೊದಲನೆಯದಾಗಿ ಶಾಲಾ ಮಟ್ಟದಲ್ಲೇ ಎಸ್‌ಡಿಎಮ್‌ಸಿ ಯನ್ನು ಬಲಪಡಿಸುವುದು ಎರಡನೆಯದಾಗಿ ಶಿಕ್ಷಣ ಹಕ್ಕು ಅನುಷ್ಠಾನದ ಪ್ರಕ್ರಿಯೆಗಾಗಿ ಸ್ಥಳೀಯ ಆಡಳಿತವನ್ನು ತೊಡಗಿಸಿಕೊಳ್ಳಲು ಅಧ್ಯಯನಾತ್ಮಕವಾಗಿ ಕಾರ್ಯಾಚರಿಸುವುದು ಕೊನೆಯದಾಗಿ ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನದ ಕುರಿತು ಇಲಾಖೆ ಮತ್ತು ಸಮಾನ ಮನಸ್ಕರೊಂದಿಗೆ ಸಮನ್ವಯತೆಯನ್ನು ಬಲಪಡಿಸುವುದು.

ಈ ಮೂರು ಪ್ರಮುಖ ಅಂಶಗಳೊಂದಿಗೆ ಯೋಜನೆಯು ಆರಂಭಗೊಂಡಿತ್ತು. ಆದರೆ ಆರಂಭ ಹಂತದಲ್ಲೇ ಕೊರೋನ ವೈರಸ್(COVID-19) ಹಾವಳಿಯಿಂದ ಸ್ಥಗಿತಗೊಂಡ ಶಾಲಾ ಚಟುವಟಿಕೆಯಿಂದಾಗಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಅನೇಕ ಸವಾಲುಗಳ ಜೊತೆ ಜೀವ ಮತ್ತು ಜೀವರಕ್ಷಣೆ ಆದ್ಯತೆಯೊಂದಿಗೆ ಪಡಿ ಸಂಸ್ಥೆಯು ನಡೆಸಿದ ಕಾರ್ಯಾಚರಣೆಯ ಹೊಸ ಕಲಿಕೆಯೊಂದಿಗೆ ಈ ವಾರ್ತಾ ಪತ್ರವನ್ನು ಹಂಚಿಕೊಳ್ಳುತ್ತಿದ್ದೇವೆ.

ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಶಿಕ್ಷಣ ಕಲಿಕೆಯ ಜೊತೆಗೆ ಆರೋಗ್ಯವೂ ಪ್ರಮುಖ ಪಾತ್ರ ವಹಿಸುತ್ತಿರುವ ಸಂದರ್ಭದಲ್ಲಿ ಮಕ್ಕಳ ಮತ್ತು ಶೈಕ್ಷಣಿಕ ಕ್ಷೇತ್ರದ ವಾರಸುದಾರರ ಆರೋಗ್ಯದ ಮೇಲೆ ಬಂದಿರುವ ಕೋರೋನಾ ವೈರಾಣು ಸೋಂಕಿನ ಪರಿಸ್ಥಿತಿಯನ್ನು ನಿಭಾಯಿಸುತ್ತಾ ಮಕ್ಕಳ ಬದುಕನ್ನು ಕಟ್ಟಿಕೊಳ್ಳುವ ಶಿಕ್ಷಣ ವ್ಯವಸ್ಥೆಯನ್ನು ಇನ್ನಷ್ಟು ಹೊಸರೀತಿಯಲ್ಲಿ ಕಟ್ಟಿಕೊಳ್ಳಬೇಕಾಗಿದೆ.. ಈ ಸುಧಾರಣಾ ವ್ಯವಸ್ಥೆಯಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆ ಜೊತೆಯಲ್ಲಿ ಶಿಕ್ಷಣ ಪ್ರಕ್ರಿಯೆಯಲ್ಲಿ ಎಲ್ಲಾ ಮಕ್ಕಳನ್ನೂ ಒಳಗೊಳ್ಳಿಸುತ್ತಾ ಬಾಲಕಾರ್ಮಿಕತೆ, ಬಾಲ್ಯವಿವಾಹ, ಹಾಗೂ ಮಕ್ಕಳ ಮೇಲಿನ ದೌರ್ಜನ್ಯದಂತಹ ಸವಾಲುಗಳಿಂದ ಮುಕ್ತಗೊಳಿಸಬೇಕಾಗಿದೆ. ಹಾಗಾಗಿ ಶಿಕ್ಷಣವನ್ನು ಮಕ್ಕಳಿಗೆ ಸಮಗ್ರವಾಗಿ ದೊರಕಿಸಿಕೊಡುವಲ್ಲಿ ಕೊರೋನಮುಕ್ತ ವಾತಾವರಣ ನಿರ್ಮಾಣ ಮಾಡಲು ನಾವೆಲ್ಲರೂ ಶ್ರಮಿಸಬೇಕಾಗಿದೆ. ಈ ನಿಟ್ಟಿನಲ್ಲಿ ಪಡಿ ಸಂಸ್ಥೆಯು ಇಲಾಖೆ ಹಾಗೂ ಸಮುದಾಯದೊಂದಿಗೆ ಸಮನ್ವಯತೆಯಿಂದ ಮುಂದುವರೆಯುವ ನಿಟ್ಟಿನಲ್ಲಿ ತಮ್ಮೆಲ್ಲರ ಸಹಕಾರ ಬಯಸುತ್ತೇವೆ.









# ಕೋವಿಡ್ 19
# ಹೆದರಬೇಡಿ, ಜಾಗೃತರಾಗಿ

## ಸೂಚನೆಗಳನ್ನು ಪಾಲಿಸಿ ಕೊರೋನಾ ಹರಡುವುದನ್ನು ತಡೆಗಟ್ಟಿ





¨ಕೆಮ್ಮುವಾಗ ಅಥವಾ ಸೀನುವಾಗ ಮುಖಕ್ಕೆ ಕರವಸ್ತ್ರ ಅಥವಾ ಬಟ್ಟೆ ಅಡ್ಡ ಹಿಡಿಯಿರಿ ಅಥವಾ ನಿಮ್ಮ ಮುಂಗೈಯನ್ನು ಅಡ್ಡ ಹಿಡಿಯಿರಿ.

¨ನಿರಂತರವಾಗಿ ಸಾಬೂನು ಅಥವಾ ಹ್ಯಾಂಡ್‌ವಾಶ್ ಬಳಸಿ ಕೈಗಳನ್ನು ತೊಳೆಯಿರಿ. ಇಲ್ಲವೇ ಸಾನಿಟೈಸರ್ ಬಳಸಿ ಕೈಗಳನ್ನು ಸ್ವಚ್ಛಗೊಳಿಸಿ





¨ನೀವು ಬೇರೆಯವರ ಜೊತೆಗಿರುವಾಗ ಮಾಸ್ಕ್‌ಗಳನ್ನು ಬಳಸಿ. ಬಾಯಿ ಹಾಗೂ ಮೂಗು ಮುಚ್ಚುವಂತೆ ಸರಿಯಾದ ಕ್ರಮದಲ್ಲಿ ಹಾಕಿಕೊಳ್ಳಿ. ಕೊರೋನಾ ಹರಡುವ ಸಾಧ್ಯತೆಯಿಂದ ಮುಕ್ತರಾಗಿ

¨ಮೂಗು ಮತ್ತು ಬಾಯಿಯನ್ನು ಪದೇ ಪದೇ ಮುಟ್ಟಬೇಡಿ. ನಿಮ್ಮ ಕೈ ಸ್ವಚ್ಛವಾಗಿಲ್ಲದಿರುವಾಗ ಸೋಂಕು ಹರಡುವ ಸಾಧ್ಯತೆಯಿದೆ.






¨ಸಾರ್ವಜನಿಕ ಸ್ಥಳಗಳಲ್ಲಿ ಪರಸ್ಪರರ ಮಧ್ಯೆ ಕನಿಷ್ಟ ಎರಡು ಮೀಟರ್ ದೈಹಿಕ ಅಂತರ ಕಾಪಾಡಿ.

¨ಜನಸಂದಣಿ ಪ್ರದೇಶಗಳಲ್ಲಿ ಓಡಾಡುವುದನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ. ಅನಗತ್ಯವಾಗಿ ಹೊರಗೆ ಹೋಗುವುದನ್ನು ತಪ್ಪಿಸಿ

¨ಕೆಮ್ಮು, ಜ್ವರ, ಉಸಿರಾಟದ ತೊಂದರೆ ಅಥವಾ ಅನಾರೋಗ್ಯ ಲಕ್ಷಣ ಕಂಡುಬಂದಲ್ಲಿ ತಕ್ಷಣ ಹತ್ತಿರದ ವೈದ್ಯರನ್ನು ಭೇಟಿಯಾಗಿ ಸಲಹೆ ಪಡೆಯಿರಿ

ಪಡಿ–ಮಂಗಳೂರು, 2ನೇ ಅಡ್ಡರಸ್ತೆ, ಲೋವರ್ ಬೆಂದೂರ್, ಮಂಗಳೂರು – 575 002

ಹೆಚ್ಚಿನ ಮಾಹಿತಿಗಾಗಿ ಸಂದರ್ಶಿಸಿ: ವೆಬ್‌ಸೈಟ್ – www.padivalored.com ದೂರವಾಣಿ – 0824-2439895

# ಶಿಕ್ಷಣ ಹಕ್ಕು ಕಾಯಿದೆ 2009 ರ ಅನುಷ್ಠಾನದಲ್ಲಿ ಎಸ್‌ಡಿಎಂಸಿ ಮತ್ತು ಸ್ಥಳೀಯ ಸರಕಾರಗಳು

ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂಬ ಬೇಡಿಕೆ ಒಂದು ಜಾಗತಿಕ ವಿಷಯವಾಗಿದೆ. ಮಗುವನ್ನು ಉತ್ತಮ ಹಾಗೂ ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುವಲ್ಲಿ ಶಿಕ್ಷಣದ ಪಾತ್ರ ಮಹತ್ವದ್ದು. ಈ ನಿಟ್ಟಿನಲ್ಲಿ ಸರಕಾರವು ಅನೇಕ ಕಾಯಿದೆ ನಿಯಮಾವಳಿಗಳನ್ನು ಕೂಡಾ ಜಾರಿಗೆ ತಂದಿದೆ. ಅವುಗಳಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ 2009 ಬಹಳ ಪ್ರಮುಖವಾದುದು ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ 2009ರಂತೆ ಪ್ರಾಥಮಿಕ ಶಿಕ್ಷಣವನ್ನು ಕ್ರಿಯಾತ್ಮಕವಾಗಿ ಹಮ್ಮಿಕೊಳ್ಳುವ ಅಗತ್ಯವಿದೆ.

ಸರಕಾರದ ಜೊತೆಗೆ, ಸಂಘಸಂಸ್ಥೆಗಳು ಮತ್ತು ಸಮುದಾಯದ ಪಾತ್ರವು ಇದರಲ್ಲಿ ಪ್ರಮುಖವಾಗಿದೆ. ಈ ನಿಟ್ಟಿನಲ್ಲಿ ಸರಕಾರ ಮತ್ತು ಸರಕಾರೇತರ ಸಂಘಸಂಸ್ಥೆಗಳು ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಲು ಬಹಳಷ್ಟು ಪ್ರಯತ್ನಗಳನ್ನು ಮಾಡಿದೆ. ಬದಲಾಗುತ್ತಿರುವ ಸನ್ನಿವೇಶದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಯ ಅಗತ್ಯವಿದ್ದು ಮಕ್ಕಳಿಗೆ ಉಚಿತ, ಸಮಾನ ಶಿಕ್ಷಣ ಮತ್ತು ಮುಖ್ಯವಾಗಿ ಗುಣಮಟ್ಟದ ಶಿಕ್ಷಣ ದೊರಕುವಂತಾಗಬೇಕೆಂಬುದು ನಮ್ಮ ಆಶಯವಾಗಿದೆ.

## ಪಡಿ ಸಂಸ್ಥೆ ಒಳಗೊಳ್ಳುವಿಕೆ (Intervention):

ಪಡಿ ಸಂಸ್ಥೆಯು 1993ರಿಂದ "ಮೌಲ್ಯಾಧಾರಿತ ಶಿಕ್ಷಣ" ಪರಿಕಲ್ಪನೆಯ ಮೂಲಕ ಪ್ರಾಥಮಿಕ ಶಿಕ್ಷಣ ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ದ.ಕ. ಮತ್ತು ಉಡುಪಿಯ ಉಭಯ ಜಿಲ್ಲೆಯಲ್ಲಿ ಕೆಲಸ ನಿರ್ವಹಿಸುತ್ತಿದೆ. ಈ ದಿಶೆಯಲ್ಲಿ ಸಮುದಾಯದ ಮಾಲಕತ್ವದ ಮೂಲಕ ಶಿಕ್ಷಕರು, ಎಸ್‌ಡಿಎಂಸಿ, ಪೋಷಕರು, ಸಂಘಸಂಸ್ಥೆಗಳು, ಪಂಚಾಯತ್ ಸದಸ್ಯರನ್ನೊಳಗೊಂಡು ಮೌಲ್ಯಾಧಾರಿತ ಶಿಕ್ಷಣಕ್ಕಾಗಿ ಜನಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದ್ದು, ಶಿಕ್ಷಣಕ್ಕಾಗಿ ಸಮುದಾಯವನ್ನು ತಯಾರುಗೊಳಿಸುವ ಮತ್ತು ಶಿಕ್ಷಣದಲ್ಲಿ ಆಗುತ್ತಿರುವ ಬದಲಾವಣೆಯನ್ನು ಸಮುದಾಯಕ್ಕೆ ಪ್ರಚುರಪಡಿಸಿ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಕಾರ್ಯೋನ್ಮುಖವಾಗಿದೆ.

2017-2020 ರ ಯೋಜನೆಯ ಅವಧಿಯಲ್ಲಿ ಮುಖ್ಯವಾಗಿ ಮಗುಸ್ನೇಹಿ ಶಾಲಾ ಶಿಕ್ಷಣಕ್ಕಾಗಿ ಗುಣಮಟ್ಟದ ಶಿಕ್ಷಣದಲ್ಲಿ ಸಮುದಾಯದ ಪಾಲುದಾರಿಕೆಯನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ 'ಮಗುಸ್ನೇಹಿ ಶಾಲೆ', 'ಮಗುಸ್ನೇಹಿ ಪಂಚಾಯತ್' ಹಾಗೂ 'ಮಕ್ಕಳ ಶಿಕ್ಷಣ, ಪೋಷಣೆ ಮತ್ತು ರಕ್ಷಣೆಯಲ್ಲಿ ಸಮುದಾಯ' ಈ ಮೂರು ಮುಖ್ಯ ಅಂಶಗಳ ನಿರ್ದಿಷ್ಟ ಪರಿಕಲ್ಪನೆಯಲ್ಲಿ ಯೋಜನೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ದ.ಕ. ಜಿಲ್ಲೆ ಮತ್ತು ಉಡುಪಿಯ ಸಹಭಾಗಿತ್ವದೊಂದಿಗೆ ಎರಡೂ ಜಿಲ್ಲೆಗಳ 8 ತಾಲೂಕುಗಳಿಂದ ಆಯ್ದ 52 ಸರಕಾರಿ ಶಾಲೆಗಳಲ್ಲಿ ಮತ್ತು 15 ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಠಾನಿಸಿದ್ದು, ಶಾಲಾ ಬೌದ್ಧಿಕ ಮತ್ತು ಬೌತಿಕ ಅಭಿವೃದ್ಧಿಯಲ್ಲಿ ಹಲವಾರು ಸಕಾರಾತ್ಮಕ ಬದಲಾವಣೆಯನ್ನು ತರುವಲ್ಲಿ ಯಶಸ್ವಿಯಾಗಿದೆ.

ಈ ಹಿನ್ನೆಲೆಯಲ್ಲಿ ಶಿಕ್ಷಣ ಹಕ್ಕು ಕಾಯಿದೆ ಮತ್ತು ಸ್ಥಳೀಯ ಸರಕಾರಗಳು ಮತ್ತು ಶಿಕ್ಷಣ ಹಕ್ಕು ಕಾಯಿದೆ ಮತ್ತು ಎಸ್‌ಡಿಎಂಸಿಗಳು ಎಂಬ 2 ಸೂಚ್ಯಂಕಗಳನ್ನು ಕೇಂದ್ರಗಳನ್ನಾಗಿರಿಸಿ ಕಾರ್ಯ ಯೋಜನೆಯನ್ನು ಮಾಡಲಾಗಿದೆ.

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಳೀಯ ಸರಕಾರಗಳ ಬಲವರ್ಧನೆ ಸೂಚ್ಯಂಕದ ಅನುಷ್ಠಾನ ಯೋಜನೆಯಾದರೆ, ಕರ್ನಾಟಕ ರಾಜ್ಯದ 4 ಶೈಕ್ಷಣಿಕ ವಿಭಾಗದ 8 ಜಿಲ್ಲೆಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆ ಮತ್ತು ಎಸ್‌ಡಿಎಂಸಿಗಳ ಮೂಲಕ "ಗುಣಾತ್ಮಕತೆಯ ಶಿಕ್ಷಣಕ್ಕಾಗಿ ಸಶಕ್ತ ಎಸ್‌ಡಿಎಂಸಿಗಳು ಮತ್ತು ಸ್ಥಳೀಯ ಸರಕಾರಗಳು" ಎಂಬ ಪರಿಕಲ್ಪನೆಯನ್ನು ಇಲಾಖಾ ಸಹಭಾಗಿತ್ವದದಲ್ಲಿ ಅನುಷ್ಠಾನಿಸಬೇಕೆಂಬ ಆಶಯವನ್ನು 2020-2023 ಯೋಜನೆಯು ಹಾಕಿಕೊಂಡಿರುತ್ತದೆ.

**ಯೋಜನೆಯ ಮುಖ್ಯ ಅಪೇಕ್ಷೆ:**

1. **ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ಸದೃಢಗೊಳಿಸುವುದರ ಮೂಲಕ ಸರಕಾರಿ ಶಾಲೆಗಳಲ್ಲಿನ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಒದಗಿಸುವುದು.**

   i. ಸಶಕ್ತ ಎಸ್‌ಡಿಎಂಸಿ ಮಾರ್ಗದರ್ಶಿಯನ್ನು ಸಿದ್ಧಗೊಳಿಸಿ, ಅದನ್ನು ಅನುಷ್ಠಾನಿಸುವುದು.

   ii. ಸಶಕ್ತ ಎಸ್‌ಡಿಎಂಸಿಯ ಮೂಲಕ ಸರಕಾರಿ ಶಾಲೆಯಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸುವುದು.

   iii. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಮಕ್ಕಳನ್ನು ಮರಳಿ ಶಾಲೆಗೆ ಸೇರುವಂತೆ ಮಾಡುವುದು ಹಾಗೂ ಇತರ ಶಾಲಾಭಿವೃದ್ಧಿ ಕೆಲಸದ ಮೂಲಕ ಮಗುಸ್ನೇಹಿ ಶಾಲಾ ವಾತಾವರಣ ನಿರ್ಮಿಸುವುದು.

   iv. ಸಶಕ್ತ ಎಸ್‌ಡಿಎಂಸಿಯ ಮೂಲಕ ಕೋವಿಡ್ 19ರ ನಂತರದಲ್ಲಿ ಶಾಲೆಯಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳ ಅಂಶಗಳು ಜಾರಿಗೆ ಬರುವಂತೆ ನೋಡಿಕೊಳ್ಳುವುದು.

   v. ಸಶಕ್ತ ಎಸ್‌ಡಿಎಂಸಿಯ ಮೂಲಕ ಸಮುದಾಯ ಸಹಭಾಗಿತ್ವದಲ್ಲಿ ಶಾಲಾ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಗೊಳಿಸುವುದು.


   vi. ಸಶಕ್ತ ಎಸ್‌ಡಿಎಂಸಿಯ ಮೂಲಕ ಮಕ್ಕಳ ಕಲಿಕಾ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ನಿರಂತರ ಮೇಲ್ವಿಚಾರಣೆಯನ್ನು ನಡೆಸುವುದು.

2. **ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನದಲ್ಲಿ ಸ್ಥಳೀಯ ಆಡಳಿತಕ್ಕೆ ಅದರ ಜವಾಬ್ದಾರಿಗಳತ್ತ ಜಾಗೃತರನ್ನಾಗಿ ಮಾಡುತ್ತಾ ಕಾರ್ಯಕ್ಷಮತೆಯಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ನೀಡಿ ಸರಕಾರಿ ಶಾಲೆಗಳಲ್ಲಿನ ಮಕ್ಕಳ ಜವಾಬ್ದಾರಿಯನ್ನು ನಿರ್ವಹಿಸುವುದು.**

   i. ಶಿಕ್ಷಣ ಹಕ್ಕು ಕಾಯಿದೆ 2009 ಮತ್ತು ಪಂಚಾಯತ್ ರಾಜ್ ಕಾಯಿದೆಗಳನ್ವಯ ಸರಕಾರಿ ಶಾಲೆಗಳಲ್ಲಿ ಗುಣಾತ್ಮಕತೆಯ ಶಿಕ್ಷಣ ವ್ಯವಸ್ಥೆಯನ್ನು ಒದಗಿಸುವಲ್ಲಿ ಸ್ಥಳೀಯ ಸರಕಾರಗಳ ಪಾತ್ರದ ಕುರಿತು ಜಾಗೃತಗೊಳಿಸುವುದು ಮತ್ತು ನಿರ್ವಹಣೆ ಮಾಡುವಲ್ಲಿ ತರಬೇತಿ ನೀಡುವುದು.

   ii. ಮಕ್ಕಳ ಹಕ್ಕುಗಳು, ಅವುಗಳ ರಕ್ಷಣೆ ಮತ್ತು ಪೋಷಣೆಯಲ್ಲಿ ಸ್ಥಳೀಯ ಸರಕಾರಗಳ ಜವಾಬ್ದಾರಿಯನ್ನು ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಕಾಯಿದೆಗಳು ಮಾತ್ರವಲ್ಲದೆ ಸಂಬಂಧಪಟ್ಟ ಪ್ರಾಧಿಕಾರಗಳು, ಇಲಾಖೆಗಳು ಮತ್ತು ಅವುಗಳ ಕರ್ತವ್ಯಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ಸಂಬಂಧಿಸಿದ

ಪ್ರಾಧಿಕಾರಗಳನ್ನು ಸಂಪರ್ಕಿಸುವ ಮೂಲಕ ವಕಾಲತುಗಳನ್ನು ನಡೆಸುವುದು ಮತ್ತು ಸಮಸ್ಯೆಗಳನ್ನು ಹಾಗೂ ಸವಾಲುಗಳನ್ನು ಮುಂದಿಡುವುದಕ್ಕಾಗಿ ಸಧೃಡಗೊಳಿಸುವುದು.




ಕರ್ನಾಟಕ ರಾಜ್ಯದ 4 ಶೈಕ್ಷಣಿಕ ವಿಭಾಗಗಳ ಅಂದರೆ ಮೈಸೂರು, ಬೆಂಗಳೂರು, ಬೆಳಗಾವಿ ಹಾಗೂ ಗುಲ್ಬರ್ಗ ಪ್ರತೀ 2 ಜಿಲ್ಲೆಗಳಿಂದ ಆಯ್ದ 8 ಕ್ಲಸ್ಟರ್ ವ್ಯಾಪ್ತಿಯ ಒಟ್ಟು 61 ಸರಕಾರಿ ಶಾಲೆಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆ 2009ರ ಅನುಷ್ಠಾನದ ವಾಸ್ತವ ಸ್ಥಿತಿಗತಿಗಳನ್ನು ಸಮೀಕ್ಷಾ ಮೂಲಕ ಅರಿತುಕೊಳ್ಳುವುದು ಅತೀ ಅಗತ್ಯವೆಂದು ಅದಕ್ಕಾಗಿ ಕಾರ್ಯತಂತ್ರಗಳನ್ನು ಯೋಜಿಸಲಾಗಿದೆ. ಆಯ್ದ ಶಾಲೆಗಳ ವಿವರಗಳು ಈ ಕೆಳಕಂಡಂತಿವೆ,

**I ಮೈಸೂರು ವಿಭಾಗದ**

1. ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನ ಸಂಪಾಜೆ ಕ್ಲಸ್ಟರ್‌ನಲ್ಲಿ – 6 ಶಾಲೆಗಳು
2. ಮಂಡ್ಯ ಜಿಲ್ಲೆಯ ಮಂಡ್ಯ ತಾಲೂಕಿನ ಹಳೆಬುದನೂರು ಕ್ಲಸ್ಟರ್‌ನಲ್ಲಿ – 8 ಶಾಲೆಗಳು

**II ಬೆಂಗಳೂರು ವಿಭಾಗದ**

3. ರಾಮನಗರ ಜಿಲ್ಲೆಯ ಚೆನ್ನಪಟ್ಟಣ ತಾಲೂಕಿನ ಮತ್ತಿಕೆರೆ ಕ್ಲಸ್ಟರ್‌ನಲ್ಲಿ – 8 ಶಾಲೆಗಳು
4. ದಾವಣಗೆರೆ ಜಿಲ್ಲೆಯ ಚೆನ್ನಗಿರಿ ತಾಲೂಕಿನ ಕತ್ತಲಗೆರೆ ಕ್ಲಸ್ಟರ್‌ನಲ್ಲಿ – 5 ಶಾಲೆಗಳು

**III ಬೆಳಗಾಂ ವಿಬಾಗದ**

5. ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಹಣಬರಾಹಟ್ಟಿ ಕ್ಲಸ್ಟರ್‌ನಲ್ಲಿ – 8 ಶಾಲೆಗಳು
6. ಬೆಳಗಾಂ ಜಿಲ್ಲೆಯ ಮುದೋಳ ತಾಲೂಕಿನ ಮಂಟೂರ ಕ್ಲಸ್ಟರ್‌ನಲ್ಲಿ – 8 ಶಾಲೆಗಳು

**IV. ಗುಲ್ಬರ್ಗಾ ವಿಭಾಗದ**

7. ರಾಯಚೂರ್ ಜಿಲ್ಲೆಯ ಸಿಂಧನೂರು ತಾಲೂಕಿನ ಜಾಲಿಹಾಲ ಕ್ಲಸ್ಟರ್‌ನಲ್ಲಿ – 10 ಶಾಲೆಗಳು
8. ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನ ಹಲಗೇರಿ ಕ್ಲಸ್ಟರ್‌ನಲ್ಲಿ – 7 ಶಾಲೆಗಳು

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಳೀಯ ಸರಕಾರಗಳು ಶಿಕ್ಷಣ ಹಕ್ಕು ಕಾಯಿದೆ 2009ರ ಸಮರ್ಪಕ ಅನುಷ್ಠಾನದಲ್ಲಿ ಅವರ ಪಾತ್ರಗಳ ನಿರ್ವಹಣೆಯ ವಾಸ್ತವ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ಒಟ್ಟು 24 ಸ್ಥಳೀಯ ಸರಕಾರ/ಆಡಳಿತವನ್ನು ಅಂದರೆ, ಪ್ರತೀ ತಾಲೂಕಿನ ಒಂದು ನಗರ/ಪುರಸಭೆ ಮತ್ತು ಎರಡು ಗ್ರಾಮ ಪಂಚಾಯತ್‌ಗಳನ್ನು ಆಯ್ದುಕೊಳ್ಳಲಾಗಿದೆ. ಅವುಗಳ ವಿವರಗಳು ಈ ಕೆಳಕಂಡಂತಿವೆ.

| ಜಿಲ್ಲೆ | ಸಂಖ್ಯೆ | ತಾಲೂಕು | ನಗರ/ಪುರ ಸಭೆ | ಗ್ರಾಮ ಪಂಚಾಯತ್ 1 | ಗ್ರಾಮ ಪಂಚಾಯತ್ 2 |
|---|---|---|---|---|---|
| ದಕ್ಷಿಣ ಕನ್ನಡ ಜಿಲ್ಲೆ | 1. | ಮಂಗಳೂರು | ಉಳ್ಳಾಲ ನಗರ ಸಭೆ | ಅಂಬ್ಲಮೊಗರು | ಮುನ್ನೂರು |
| | 2. | ಪುತ್ತೂರು | ಪುತ್ತೂರು ನಗರ ಸಭೆ | ಹಿರೆಬಂಡಾಡಿ | ನೆಕ್ಕಿಲ್ಲಾಡಿ |
| | 3. | ಸುಳ್ಯ | ಸುಳ್ಯ ನಗರ ಪಂಚಾಯತ್ | ಜಾಲ್ಸೂರು | ಕನಕಮಜಲು |
| | 4. | ಬಂಟ್ವಾಳ | ಬಂಟ್ವಾಳ ಪುರ ಸಭೆ | ಪುದು | ಮಾಣಿ |
| | 5. | ಬೆಳ್ತಂಗಡಿ | ಬೆಳ್ತಂಗಡಿ ನಗರ ಪಂಚಾಯತ್ | ಇಂದಬೆಟ್ಟು | ಮೇಲಂತಬೆಟ್ಟು |
| ಉಡುಪಿ | 6. | ಉಡುಪಿ | ಉಡುಪಿ ನಗರ ಸಭೆ | ಉದ್ಯಾವರ | ಬಡಗಬೆಟ್ಟು |
| | 7. | ಕುಂದಾಪುರ | ಕುಂದಾಪುರ ಮುನಿಸಿಪಾಲಿಟಿ | ಕೋಣಿ | ಕಂದಾವರ |
| | 8. | ಕಾರ್ಕಳ | ಕಾರ್ಕಳ ಮುನಿಸಿಪಾಲಿಟಿ | ನಿಟ್ಟೆ | ಹಿರ್ಗಾನ |

**ಮೂಲ ಅಂಕಿಅಂಶಗಳ ಕ್ರೋಢೀಕರಣ:**

ಯೋಜನೆಯ ಅನುಷ್ಠಾನದಲ್ಲಿ ಶಿಕ್ಷಣ ಹಕ್ಕು ಕಾಯಿದೆ 2009ರ ಭಾಗ 5 ಮತ್ತು ಸೆಕ್ಷನ್ 19 ಮತ್ತು 25ರಡಿ ಆಯ್ದ ಈ ಕೆಳಕಂಡ 8 ಅಂಶಗಳನ್ನು ಮೂಲವಾಗಿರಿಸಿ ಸಮೀಕ್ಷೆ ನಡೆಸುವುದು.

1. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕಾರ್ಯ ನಿರ್ವಹಣೆ (ಮುಖ್ಯ ಕೇಂದ್ರೀಕರಣ)
2. ಮಕ್ಕಳ ಕಲಿಕಾ ಗುಣಮಟ್ಟದ ಮೌಲ್ಯಮಾಪನ
3. ವಿಷಯವಾರು ಶಿಕ್ಷಕರ ನೇಮಕಾತಿ
4. 1:30 ರ ಅನುಪಾತದಲ್ಲಿ ಶಿಕ್ಷಕರ ನೇಮಕಾತಿ
5. ಸುಸಜ್ಜಿತ ಶಾಲಾ ಕಟ್ಟಡ
6. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ
7. ಶುದ್ಧ ಕುಡಿಯುವ ನೀರು
8. ಉತ್ತಮ ಆಟದ ಮೈದಾನ ಮತ್ತು ಆಟದ ಸಾಮಗ್ರಿಗಳು

ಸ್ಥಳೀಯ ಸರಕಾರಗಳು ತಮ್ಮ ವ್ಯಾಪ್ತಿಯ ಮಕ್ಕಳ ಶಿಕ್ಷಣ ಹಾಗೂ ಅವರ ರಕ್ಷಣೆಯತ್ತ ತೆಗೆದುಕೊಳ್ಳುತ್ತಿರುವ ಜವಾಬ್ದಾರಿಗಳ ವಾಸ್ತವ ಸ್ಥಿತಿಗತಿಗಳನ್ನು ಕಂಡುಕೊಳ್ಳಲು ಮೂಲ ಅಂಕಿಅಂಶಗಳ ಕ್ರೋಢೀಕರಣಕ್ಕಾಗಿ ಸಂಪೂರ್ಣ ಮಾಹಿತಿಯನ್ನು ಪಡೆಯಲು ಸೂಕ್ತವಾದ ಫಾರಂ/ನಮೂನೆಯನ್ನು ಸಿದ್ಧಪಡಿಸಲಾಗಿದೆ.

2020 ಮಾರ್ಚ್‌ನಲ್ಲಿ ಆರಂಭಗೊಂಡ ಸಮೀಕ್ಷಾ ಪ್ರಕ್ರಿಯೆಯು ಕೋವಿಡ್ 19ರ ತೀವ್ರತರ ಉಲ್ಬಣತಾ ಪರಿಸ್ಥಿತಿಯಲ್ಲಿ 2020 ಆಗಸ್ಟ್ ತಿಂಗಳಿನಲ್ಲಿ ಸಂಪೂರ್ಣವಾಗಿ ಮುಗಿಯಿತು. ನಂತರದಲ್ಲಿ ಸಮೀಕ್ಷಾ ದತ್ತಾಂಶಗಳನ್ನು ಕ್ರೋಢೀಕರಿಸಿ, ವಿಶ್ಲೇಷಣಾ ವರದಿಯನ್ನು ಹೊರತರಲಾಯಿತು. ಈ ವರದಿಯ ಪ್ರಕಾರ ಕಂಡುಕೊಂಡ ವಾಸ್ತವಾಂಶವೇನೆಂದರೆ ಸರಕಾರಿ ಶಾಲೆಗಳಲ್ಲಿನ ಶಾಲಾಭಿವೃದ್ಧಿ ಸಮಿತಿಗಳಲ್ಲಿ ಅವರ ಜವಾಬ್ದಾರಿಗಳ, ಕರ್ತವ್ಯಗಳ ಅರಿವು ಇಲ್ಲದಿರುವುದು. ಪರಿಣಾಮವಾಗಿ ಶಿಕ್ಷಣ ಹಕ್ಕು ಕಾಯಿದೆ 2009ರನ್ವಯ ಮಕ್ಕಳಿಗೆ ಶಾಲೆಗಳಲ್ಲಿ ದೊರಕಬೇಕಾದ ಗುಣಾತ್ಮಕ ಶಿಕ್ಷಣ ಮಾತ್ರವಲ್ಲದೆ ಸರಕಾರಿ ಶಾಲೆಗಳಲ್ಲಿ ಶೇಕಡಾ 99%ರಷ್ಟು ಮೂಲಭೂತ ಸೌಕರ್ಯಗಳ ಕೊರತೆಯು ಕಂಡು ಬಂದಿರುವುದು. ಅಂತೆಯೇ ಸ್ಥಳೀಯ ಸರಕಾರದ ಸಮೀಕ್ಷಾ ವಿಶ್ಲೇಷಣೆಯ ವರದಿಯಲ್ಲಿ ಶಿಕ್ಷಣ ಹಕ್ಕು ಕಾಯಿದೆ 2009 ಭಾಗ 3ರನ್ವಯ ಸ್ಥಳೀಯ ಸರಕಾರವು ಮಕ್ಕಳ ಶಿಕ್ಷಣ ರಕ್ಷಣೆ ಮತ್ತು ಪೋಷಣೆಯೆಡೆಗೆ ತೆಗೆದುಕೊಳ್ಳಬೇಕಾದ ಜವಾಬ್ದಾರಿಗಳ ಅರಿವು ಇಲ್ಲದಿರುವುದು ಕಂಡುಕೊಂಡ ವಾಸ್ತವಾಂಶವಾಗಿದೆ.

ಹೀಗಾಗಿ ಸರಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಗುಣಾತ್ಮಕ ಶಿಕ್ಷಣದೊಂದಿಗೆ ಶಾಲಾ ಮೂಲಭೂತ ಸೌಕರ್ಯಗಳಲ್ಲಿ ಎಸ್‌ಡಿಎಂಸಿಯವರ ಒಳಗೊಳ್ಳುವಿಕೆ ಮತ್ತು ಕಾರ್ಯಾನುಷ್ಠಾನಗೊಳಿಸಲು ಸಮಿತಿಯ ಸದಸ್ಯರನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ಮಹತ್ವವಾದ ಕೈಪಿಡಿಯ ಕರಡೊಂದನ್ನು ತಯಾರಿಸಿತು.

ಈ ಎಲ್ಲ ಪ್ರಕ್ರಿಯೆಗಳಲ್ಲಿ ರಾಜ್ಯ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಇಲಾಖೆ ಅಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆಗಳ ಅಧಿಕಾರಿಗಳು, ತಾಲೂಕು ಶಿಕ್ಷಣ ಇಲಾಖೆಗಳ ಅಧಿಕಾರಿಗಳು ಮತ್ತು ಸಮೂಹ ಸಂಪನ್ಮೂಲ ಕೇಂದ್ರಗಳ ಸಮೂಹ ಸಂಪನ್ಮೂಲ ವ್ಯಕ್ತಿಗಳನ್ನು ಜತೆ ಸೇರಿಸಿ ಆಯಾ ವಿಭಾಗಗಳಲ್ಲಿ ಸಮಾಲೋಚನೆಗಳನ್ನು ನಡೆಸಲಾಗಿ ಈ ಯೋಜನೆಯ ಅನುಷ್ಠಾನದಲ್ಲಿ ಒಳಗೊಳ್ಳುವಂತೆ ಕಾರ್ಯತಂತ್ರಗಳ ಸೂತ್ರೀಕರಣವನ್ನು ಮಾಡಲಾಗಿದೆ.

ಅಷ್ಟೇ ಅಲ್ಲದೆ ಶಿಕ್ಷಣ ಹಕ್ಕು ಕಾಯಿದೆಯ ಸಮರ್ಪಕ ಅನುಷ್ಠಾನದ ಮುಖ್ಯ ಪ್ರಾಧಿಕಾರವಾದ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸಮಿತಿಯೊಂದಿಗೂ ಯೋಜನೆಯ ಪ್ರಸ್ತಾವನೆಯನ್ನು ನೀಡಿದ್ದು ಅವರ ಸಂಪೂರ್ಣ ಸಹಕಾರ ಬೆಂಬಲದ ಆಶ್ವಾಸನೆಯನ್ನು ನೀಡಿರುತ್ತಾರೆ.

**ಸಮಾಲೋಚನೆಗಳಲ್ಲಿ ಇಲಾಖೆ ಹಾಗೂ ಪ್ರಾಧಿಕಾರಗಳಿಂದ ಯೋಜನೆಯ ನಿರೀಕ್ಷೆಗಳು ಈ ರೀತಿಯಾಗಿವೆ:**

1. ಶಾಲಾ ಎಸ್‌ಡಿಎಂಸಿ ಸದಸ್ಯರೊಂದಿಗೆ ಮೂಲ ಅಂಕಿಅಂಶಗಳ ವಿಶ್ಲೇಷಣಾ ಸಮಾಲೋಚನೆಗೆ ಹಾಗೂ ಸಮಾಲೋಚನಾ ನಂತರದಲ್ಲಿ ಶಾಲಾ ಹಂತದ ಕರಡು ಕ್ರಿಯಾ ಯೋಜನೆಯ ತಯಾರಿ ತರಬೇತಿಯಲ್ಲಿ ಎಸ್‌ಡಿಎಂಸಿ ಸದಸ್ಯರು, ಶಾಲಾ ಮುಖ್ಯ ಶಿಕ್ಷಕರು ಮತ್ತು ಸಮೂಹ ಸಂಪನ್ಮೂಲ ವ್ಯಕ್ತಿಗಳು ಹಾಜರಾಗುವಂತೆ ಆದೇಶ ನೀಡುವುದು.

2. ಯೋಜನಾ ವ್ಯಾಪ್ತಿಯ 61 ಸರಕಾರಿ ಶಾಲೆಗಳಲ್ಲಿ 2 ವರ್ಷ ಅವಧಿಯಲ್ಲಿ ನಡೆಸುವ ಶಾಲಾ ಹಂತದ ಎಸ್‌ಡಿಎಂಸಿ ತರಬೇತಿಗೆ ಎಸ್‌ಡಿಎಂಸಿ ಸದಸ್ಯರು ಮತ್ತು ಮುಖ್ಯ ಶಿಕ್ಷಕರು ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿ (ಸಿಆರ್‌ಪಿ)ಯವರನ್ನು ಹಾಜರಾಗುವಂತೆ ನಿರ್ದೇಶನ ನೀಡುವುದು.

3. ಕರಡು ಯೋಜನೆಯ ಆಧಾರದಲ್ಲಿ ಅಂತಿಮಗೊಳಿಸಿದ ತರಬೇತಿ ಕೈಪಿಡಿಯನ್ನು ಶಾಲಾ ಹಂತದಲ್ಲಿ ಅನುಷ್ಠಾನಿಸಲು ರಾಜ್ಯ ಮಟ್ಟದಲ್ಲಿ ನಡೆಯುವ ಸಂಪನ್ಮೂಲ ವ್ಯಕ್ತಿಗಳ ತರಬೇತಿಗೆ ಸಿಆರ್‌ಪಿಯವರನ್ನು ಹಾಜರಾಗಲು ಅನುಮತಿ ನೀಡುವುದು.

4. ಕರಡು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪಡಿ ಸಂಸ್ಥೆಯು ತಯಾರುಪಡಿಸಿದ ಶಾಲಾ ಹಂತದಲ್ಲಿ ನೀಡುವ ಎಸ್‌ಡಿಎಂಸಿ ತರಬೇತಿ ಕೈಪಿಡಿಯನ್ನು ಅನುಷ್ಠಾನಿಸಲು ಅನುಮತಿ ನೀಡುವುದು. ಮತ್ತು ತರಬೇತಿಗಳಲ್ಲಿ ಎಸ್‌ಡಿಎಂಸಿ ಸದಸ್ಯರು ಹಾಗೂ ಶಾಲಾ ಮುಖ್ಯ ಶಿಕ್ಷಕರು ಭಾಗವಹಿಸುವಂತೆ ನಿರ್ದೇಶನ ನೀಡುವುದು.

5. ತರಬೇತಿಯ ಅನುಸರಣೆಯಾಗಿ, ಪಡಿ ಶೈಕ್ಷಣಿಕ ಕಾರ್ಯಕರ್ತರಿಂದ ಎಸ್‌ಡಿಎಂಸಿ ಸದಸ್ಯರಿಗೆ ಶಾಲಾ ಹಂತದಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಸಮಾಲೋಚನೆಗಾಗಿ ಬೇಟಿ ನೀಡಲು ಅನುಮತಿ ನೀಡುವುದು.

6. ಶಾಲಾಭಿವೃದ್ಧಿ ಯೋಜನೆಯ ಆಧಾರದಲ್ಲಿ ಕ್ಲಸ್ಟರ್ ಹಂತದ ಯೋಜನೆ (CSDP)ಅನುಷ್ಠಾನದ ಮೇಲ್ವಿಚಾರಣೆಗಾಗಿ ಕ್ಲಸ್ಟರ್ ಹಂತದಲ್ಲಿ ಸಮೂಹ ಸಂಪನ್ಮೂಲ ವ್ಯಕ್ತಿಗಳಿಂದ ತ್ರೈಮಾಸಿಕ ಪ್ರಗತಿ ಪರಿಶೀಲನೆ ಮತ್ತು ಮಾರ್ಗದರ್ಶನಕ್ಕಾಗಿ ನಡೆಯುವ ಸಭೆಯಲ್ಲಿ ಶಾಲಾ ಮುಖ್ಯ ಶಿಕ್ಷಕರು ಮತ್ತು ಎಸ್‌ಡಿಎಂಸಿ ಪ್ರತಿನಿಧಿಗಳು ಹಾಜರಾಗಲು ಅನುಮತಿ ನೀಡುವುದು.

7. ಪ್ರತೀ 6 ತಿಂಗಳಿಗೊಮ್ಮೆ ಪ್ರಗತಿ ಪರಿಶೀಲನಾ ಸೂಚ್ಯಂಕಗಳ ಆಧಾರದಲ್ಲಿ ಶಾಲಾ ಹಂತದಲ್ಲಿ ನಡೆಯುವ ಮಕ್ಕಳ ಶೈಕ್ಷಣಿಕ ಗುಣಮಟ್ಟದ ಮೌಲ್ಯಮಾಪನ ಮತ್ತು ಶಾಲಾ ಮೂಲಭೂತ ಸೌಕರ್ಯ ಅಭಿವೃದ್ಧಿಗಳ ಪರಿಶೀಲನೆಗಾಗಿ DIET ಉಪನ್ಯಾಸಕರು ಮತ್ತು ಸಮೂಹ ಸಂಪನ್ಮೂಲ ವ್ಯಕ್ತಿಗಳು ಶಾಲಾ ಬೇಟಿ ನೀಡಿ ಮೌಲ್ಯಮಾಪನ ಮತ್ತು ಅನುಪಾಲನೆ ಮಾಡಲು ನಿರ್ದೇಶನವನ್ನು ನೀಡುವುದು.

8. ವರ್ಷಕ್ಕೆ 2 ಬಾರಿಯಂತೆ ನಡೆಯುವ ಶಾಲಾ ಶೈಕ್ಷಣಿಕ ಗುಣಮಟ್ಟ ಮತ್ತು ಶಾಲಾಭಿವೃದ್ಧಿ ಯೋಜನೆಯ ಅನುಷ್ಠಾನದ ಸಾಧಕ–ಬಾಧಕಗಳ ಬಗ್ಗೆ ಜಿಲ್ಲಾ ಮಟ್ಟದ ಸಾರ್ವಜನಿಕ ಶಿಕ್ಷಣ ಇಲಾಖೆಗಳ ಉಪನಿರ್ದೇಶಕರುಗಳ ಉಪಸ್ಥಿತಿಯಲ್ಲಿ ಸಮಾಲೋಚನೆ ನಡೆಸಲು ಅನುಮತಿ ನೀಡುವುದು.

9. ವರ್ಷಕ್ಕೆ 2 ಬಾರಿಯಂತೆ ನಡೆಯುವ ಶಾಲಾ ಶೈಕ್ಷಣಿಕ ಗುಣಮಟ್ಟ ಮತ್ತು ಶಾಲಾಭಿವೃದ್ಧಿ ಯೋಜನೆಯ ಅನುಷ್ಠಾನದ ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಲು ಮತ್ತು ಅಭಿವೃದ್ಧಿಗಾಗಿ ಸಲಹೆಗಳ ಬಗ್ಗೆ ನಡೆಯುವ ಸಮಾಲೋಚನಾ ಸಭೆಯಲ್ಲಿ ಜಿಲ್ಲಾ ಮಟ್ಟದ ಸಾರ್ವಜನಿಕ ಶಿಕ್ಷಣ ಇಲಾಖೆಗಳ ಉಪನಿರ್ದೇಶಕರು,

DIET ಪ್ರಾಂಶುಪಾಲರು ಮತ್ತು ಉಪನ್ಯಾಸಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಿಆರ್‌ಪಿಯವರು ಹಾಜರಾಗುವಂತೆ ನಿರ್ದೇಶನ ನೀಡುವುದು.

10. ವರ್ಷಕ್ಕೊಂದು ಬಾರಿ ರಾಜ್ಯಮಟ್ಟದಲ್ಲಿ ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ DSERTನೊಂದಿಗೆ ಗುಣಾತ್ಮಕತೆಯ ಶಿಕ್ಷಣದತ್ತ ಎಸ್‌ಡಿಎಂಸಿಗಳ ಪ್ರಗತಿ ಕಾರ್ಯಗಳ ವರದಿ ಮಂಡನೆ ಮಾಡಲು ಅನುಮತಿ ನೀಡುವುದು.

11. ವರ್ಷಕ್ಕೊಂದು ಬಾರಿ ರಾಜ್ಯಮಟ್ಟದಲ್ಲಿ ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ (DSERT)ನೊಂದಿಗೆ ಗುಣಾತ್ಮಕತೆಯ ಶಿಕ್ಷಣದತ್ತ ಎಸ್‌ಡಿಎಂಸಿಗಳ ಪ್ರಗತಿ ಕಾರ್ಯಗಳ ವರದಿ ಮಂಡನೆ ಮತ್ತು ಎಸ್‌ಡಿಎಂಸಿ ಸಶಕ್ತೀಕರಣ ಚಟುವಟಿಕೆಗಳಿಗೆ ಮಾರ್ಗದರ್ಶನ ಸಮಾಲೋಚನಾ ಸಭೆಯಲ್ಲಿ ಯೋಜನಾ ವ್ಯಾಪ್ತಿಯ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಗಳ ಉಪನಿರ್ದೇಶಕರು, DIET ಪ್ರಾಂಶುಪಾಲರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಜರಾಗಲು ನಿರ್ದೇಶನ ನೀಡುವುದು.

12. ಗುಣಾತ್ಮಕತೆಯ ಶಿಕ್ಷಣದತ್ತ **'ಸಶಕ್ತ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ'** ಗಳಿಗಾಗಿ ನಡೆಸಲಾದ ಚಟುವಟಿಕೆಗಳ ಫಲಪ್ರದ ಪರಿಣಾಮಗಳನ್ನು ಅಂತಿಮ ದಾಖಲೀಕರಿಸುವಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಕಾರ ನೀಡುವುದು.

ಯೋಜನೆಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಬಲವರ್ಧನೆಗಾಗಿ ತಯಾರಿಸಿದ ಕರಡು ಕೈಪಿಡಿಯು ನಂತರದಲ್ಲಿ ಎಸ್‌ಡಿಎಂಸಿ ಮಾರ್ಗದರ್ಶಿಯಾಗಿ ಇಲಾಖೆಯ ಮಾರ್ಗದರ್ಶನದ ಮೇರೆಗೆ ಅಂತಿಮೀಕರಣಗೊಳಿಸಲಾಗುವುದು.

ಎಸ್‌ಡಿಎಂಸಿ ಮಾರ್ಗದರ್ಶಿಯನ್ವಯ ಶಾಲಾ ಹಂತದಲ್ಲಿ ಮುಂದಿನ 2021–2022 ಹಾಗೂ 2022–2023ರ ಅವಧಿಯಲ್ಲಿ 244 ಎಸ್‌ಡಿಎಂಸಿ ತರಬೇತಿಗಳು ನಡೆಯುವುದು. ಅಂದರೆ ಪ್ರತೀ ಶಾಲೆಗಳ ಎಸ್‌ಡಿಎಂಸಿಯು 4 ಹಂತದ ತರಬೇತಿಯನ್ನು ಪಡೆಯುವುದು.

**ತರಬೇತಿಯಲ್ಲಿ ಅಳವಡಿಸುವ ವಿಷಯಗಳು:**

1. ಪ್ರಸ್ತುತ ಶಾಲಾ ವಾಸ್ತವ ಸ್ಥಿತಿಯ ವಿಶ್ಲೇಷಣಾ ವರದಿ (ಈಗಾಗಲೇ ಸಂಗ್ರಹಿಸಿದ ಮೂಲ ಅಂಕಿ ಅಂಶಗಳ ಆಧಾರದಲ್ಲಿ)
2. ಶಾಲಾ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಸಮುದಾಯದ ಸಹಭಾಗಿತ್ವದ ಅಗತ್ಯತೆ
3. 3 ವರ್ಷಗಳ ಅವಧಿಯ ಶಾಲಾಭಿವೃದ್ಧಿ ಯೋಜನೆಯ ತಯಾರಿ ಹಾಗೂ ಈ ತಯಾರಿಯಲ್ಲಿ ಒಳಗೊಳ್ಳುವ ವಿಷಯಗಳು

   * ಶಾಲಾ ಮೂಲಭೂತ ಸೌಕರ್ಯಗಳ ಅಭಿವೃದ್ಧಿ
   * ಮಕ್ಕಳ ಗುಣಾತ್ಮಕ ಕಲಿಕೆಯ ಪರಿಶೀಲನೆ

* ಶಾಲಾ ಕುಂದುಕೊರತೆಗಳ ನಿವಾರಣೆ ಮತ್ತು ಪರಿಶೀಲನಾ ವಿಧಾನ
* ಶಾಲಾಭಿವೃದ್ಧಿ ಯೋಜನೆಯ ಸ್ವಮೌಲ್ಯಮಾಪನಾ ಪ್ರಕ್ರಿಯಾ ವಿಧಾನ

4. ಕಾಲಕಾಲಕ್ಕೆ ಶಾಲಾಭಿವೃದ್ಧಿ ಯೋಜನೆಯ ಅನುಷ್ಠಾನದ ಪುನರ್‌ಪರಿಶೀಲನಾ ವಿಧಾನ

**ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ತರಬೇತಿ ನೀಡುವುದರಿಂದ ನಿರೀಕ್ಷಿಸುವ ಫಲಿತಾಂಶಗಳು ಹೀಗಿವೆ.**

1. ಕೋವಿಡ್ 19ನ ಪರಿಣಾಮ ದೀರ್ಘಕಾಲದಿಂದ ಮಕ್ಕಳಲ್ಲಾದ ಕಲಿಕೆಯ ಅಂತರ (learning gap)ದ ಸಂದರ್ಭದಲ್ಲಾದ ತೊಂದರೆಗಳು ಮತ್ತು ಸವಾಲುಗಳ ಅಧ್ಯಯನ ನಡೆಸಿ ಅದರ ಅನುಸರಣೆಗೆ ಇಲಾಖಾ ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳುವುದು.
2. ಶಾಲಾಭಿವೃದ್ಧಿ ಯೋಜನೆಗೆ ಪೂರಕವಾದ 'ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಕಾರ್ಯ ಮಾರ್ಗದರ್ಶಿ (SDMC Implementing Guidelines) ರಚನೆಗೊಂಡು ಸಮೂಹ ಸಂಪನ್ಮೂಲ ಕೇಂದ್ರಗಳ ಮಟ್ಟದ ಯೋಜನೆಯು ತಯಾರಿಯಾಗಿ ಸಮೂಹ ಸಂಪನ್ಮೂಲ ವ್ಯಕ್ತಿಗಳ ಮೇಲ್ವಿಚಾರಣೆಯೊಂದಿಗೆ ಶಾಲಾಹಂತದಲ್ಲಿ ಅನುಷ್ಠಾನಗೊಳ್ಳುತ್ತದೆ.
3. ಶಾಲಾಭಿವೃದ್ದಿಗಾಗಿ ಪೋಷಕರ ಮತ್ತು ಎಸ್‌ಡಿಎಂಸಿಯ ಸಬಲೀಕರಣದೊದಿಗೆ ಶಾಲಾ ಚಟುವಟಿಕೆಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಹೆಚ್ಚುತ್ತದೆ.
4. ಎಸ್‌ಡಿಎಮ್‌ಸಿ ಸದಸ್ಯರು ಮಕ್ಕಳ ಸ್ನೇಹಿ ಶಾಲಾ ವಾತಾವರಣ ನಿರ್ಮಾಣ ಮಾಡುವಲ್ಲಿ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನವನ್ನು ಪಡೆದು ಸಬಲರಾಗುತ್ತಾರೆ.
5. ಕ್ಲಸ್ಟರ್ ಮಟ್ಟದಲ್ಲಿ ಎಸ್‌ಡಿಎಂಸಿಯವರನ್ನೊಳಗೊಂಡ ಸ್ಥಳೀಯ ಕ್ಲಸ್ಟರ್ ಸಂಪನ್ಮೂಲ ತಂಡದ ರಚನೆಯಾಗುತ್ತದೆ.
6. ಮಕ್ಕಳ ನಿರಂತರ ಗೈರುಹಾಜರಿ ಕಡಿಮೆಯಾಗಿ, ಎಲ್ಲಾ ಮಕ್ಕಳು ಗುಣಮಟ್ಟದ ಶಿಕ್ಷಣವನ್ನು ಪಡೆಯುತ್ತಾರೆ.
7. ಸರಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಾಗುತ್ತದೆ ಮಾತ್ರವಲ್ಲದೆ ಕಲಿಕಾ ಗುಣಮಟ್ಟದಲ್ಲಿ ಅಭಿವೃದ್ಧಿಯಾಗುತ್ತದೆ.
8. ಸಮುದಾಯದ ಸಹಭಾಗಿತ್ವದಲ್ಲಿ ಶೈಕ್ಷಣಿಕ ಅಭಿವೃದ್ಧಿ ಚಟುವಟಿಕೆಗಳ ಮೂಲಕ ಶಾಲಾ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಾಗುತ್ತದೆ.
9. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ (ಎಸ್‌ಡಿಎಂಸಿ) ಸಮಿತಿಗಳು ಶಿಕ್ಷಣ ಹಕ್ಕು ಕಾಯ್ದೆ 2009ರನ್ವಯ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಾ ತಮ್ಮ ಶಾಲೆಗಳನ್ನು ಮಗುಸ್ನೇಹಿ ಶಾಲೆ ಹಾಗು ಮಗುಸ್ನೇಹಿ ಸಮುದಾಯವಾಗಿ ಮಾರ್ಪಡಿಸುವ ಮೂಲಕ ಕರ್ನಾಟಕದ ರಾಜ್ಯಕ್ಕೆ ಮಾದರಿಯಾಗುತ್ತದೆ.
10. ಇಲಾಖೆಯು ಈ ಮಾದರಿಯನ್ನು ಗುರುತಿಸಿ ರಾಜ್ಯದ ಎಲ್ಲಾ ಸರಕಾರಿ ಶಾಲೆಗಳಲ್ಲಿ ಅಳವಡಿಸಲು ಅನುಕೂಲವಾಗುತ್ತದೆ.

11. ಶಾಲಾ ಮಟ್ಟದಲ್ಲೇ ಎಸ್‌ಡಿಎಂಸಿ ಸದಸ್ಯರನ್ನು ತರಬೇತುಗೊಳಿಸುವ ಸಮುದಾಯ ಆಧಾರಿತ, ಶಾಲಾ ಆಧಾರಿತ ಸಶಕ್ತ ಶಾಲಾ ಕೈಪಿಡಿ ತಯಾರಿಯಾಗುತ್ತದೆ.

**ತರಬೇತಿಗಾಗಿ ಸಂಪನ್ಮೂಲ ವ್ಯಕ್ತಿಗಳ ತಂಡದ ರಚನೆ:–**

ಈ ತರಬೇತಿ ನಡೆಸುವದಕ್ಕಾಗಿ ಯೋಜನೆಯು ಸ್ಥಳೀಯ ಸಂಪನ್ಮೂಲ ತಂಡದ ರಚನೆಗಾಗಿ 2017–2020 ಯೋಜನೆಯ 120 ಫಲಾನುಭವಿಗಳಲ್ಲಿ ಸಮಾಲೋಚನೆ, ಸಭೆ, ತರಬೇತಿ, ಮಾಹಿತಿ ಶಿಬಿರಗಳನ್ನು ಮಾಡುತ್ತಾ ಯೋಜನೆಯ ಪರಿಕಲ್ಪನೆಯನ್ನು ಅರ್ಥೈಸಿಕೊಂಡು ತರಬೇತುದಾರರಾಗಿ ಮುಂದುವರಿಯಲು ಆಸಕ್ತರಾಗಿರುವ 40 ಮಂದಿ ಆಸಕ್ತರನ್ನು ಎಸ್‌ಡಿಎಂಸಿ ಮಾರ್ಗದರ್ಶಿ ಅನುಷ್ಠಾನದಲ್ಲಿ ತೊಡಗಿಸಿಕೊಳ್ಳುವುದೆಂದು ನಿರ್ಧರಿಸಲಾಗಿ ಈ ನಿಟ್ಟಿನಲ್ಲಿ ಅವರಿಗೆ ತರಬೇತಿ ನೀಡಲಾಯಿತು.

ತರಬೇತುಗೊಂಡ ಸಂಪನ್ಮೂಲ ವ್ಯಕ್ತಿಗಳನ್ನು ಪಡಿ–ಎಸ್‌ಡಿಎಂಸಿ ತರಬೇತುದಾರರು ಎಂಬುದಾಗಿ ಕರೆಯಲ್ಪಡುವರು. 61 ಶಾಲೆಗಳಲ್ಲಿ ತರಬೇತಿಗಳು ನಡೆದಿದ್ದು,

* ಶಾಲಾ ಎಸ್‌ಡಿಎಂಸಿ ಸದಸ್ಯರೊಂದಿಗೆ ಮೂಲ ಅಂಕಿಅಂಶಗಳ ವಿಶ್ಲೇಷಣಾ ಸಮಾಲೋಚನೆಗಳು ನಡೆದು ನಿರ್ದಿಷ್ಟ ಶಾಲೆಗಳ ವಾಸ್ತವಾಂಶಗಳ ಅರಿವನ್ನು ನೀಡಲಾಗಿದೆ.
* ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಕುರಿತ ಒಂದು ವರ್ಷದ ಕ್ರಿಯಾ ಯೋಜನೆಯ ತಯಾರಿಯಾಗಿದೆ.
* ಶಾಲಾಭಿವೃದ್ಧಿ ಯೋಜನೆಯ ಆಧಾರದಲ್ಲಿ ಕ್ಲಸ್ಟರ್ ಹಂತದ ಯೋಜನೆ (CSDP) ಅನುಷ್ಠಾನದ ಮೇಲ್ವಿಚಾರಣೆಗಾಗಿ ಕ್ಲಸ್ಟರ್ ಹಂತದಲ್ಲಿ ಸಮೂಹ ಸಂಪನ್ಮೂಲ ವ್ಯಕ್ತಿಗಳಿಂದ ತ್ರೈಮಾಸಿಕ ಪ್ರಗತಿ ಪರಿಶೀಲನೆ ಮತ್ತು ಮಾರ್ಗದರ್ಶನ.
* ಶಾಲಾ ಹಂತದಲ್ಲಿ ಮಕ್ಕಳ ಶೈಕ್ಷಣಿಕ ಗುಣಮಟ್ಟದ ಮೌಲ್ಯಮಾಪನ ಮತ್ತು ಶಾಲಾ ಮೂಲಭೂತ ಸೌಕರ್ಯ ಅಭಿವೃದ್ಧಿಗಳ ಪರಿಶೀಲನೆಗಾಗಿ DIET ಉಪನ್ಯಾಸಕರು ಮತ್ತು ಸಮೂಹ ಸಂಪನ್ಮೂಲ ವ್ಯಕ್ತಿಗಳಿಂದ ಶಾಲಾ ಬೇಟಿ.


**ಕ್ಲಸ್ಟರ್ ಸಂಪನ್ಮೂಲ ತಂಡದ ರಚನೆ :–**

ಸಿದ್ಧಗೊಂಡ ಕ್ಲಸ್ಟರ್ ಅಭಿವೃದ್ಧಿ ಯೋಜನೆಯ ಮೂಲಕ ಸಮಗ್ರ ಅಭಿವೃದ್ಧಿಗಾಗಿ ಇಲಾಖೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಹಾಗೂ ಪರಿಣತ ಮತ್ತು ಅನುಭವವುಳ್ಳ ಎಸ್‌ಡಿಎಂಸಿ ಸದಸ್ಯರ ತರಬೇತುದಾರರ ತಂಡವನ್ನು ಬೆಳೆಸುವ ಹಾಗೂ ಸ್ಥಳೀಯವಾಗಿ ಸಂಪನ್ಮೂಲ ವ್ಯಕ್ತಿ ಲಭ್ಯವಾಗುವಂತೆ ಕ್ಲಸ್ಟರ್ ಸಂಪನ್ಮೂಲ ಕೇಂದ್ರ ಈ ನಿಟ್ಟಿನಲ್ಲಿ ಸುಸಜ್ಜಿತಗೊಂಡು ಎಸ್‌ಡಿಎಂಸಿಯವರು ಇದರ ಪ್ರಯೋಜನವನ್ನು ಪಡೆಯುವಂತಾಗಬೇಕು.

**ಕೋವಿಡ್ ಮಧ್ಯಂತರ ಜಾಗೃತ ಕ್ರಮಗಳು :-**

ಪ್ರಪಂಚಾದ್ಯಂತ ಬಾಧಿಸಲ್ಪಟ್ಟ ಕೋವಿಡ್ 19 ಪಿಡುಗು ಮುಂದಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷವಾಗಿ ಮಕ್ಕಳ ಆರೋಗ್ಯದ ಮೇಲೆ ಹೆಚ್ಚಿನದಾಗಿ ನಕಾರಾತ್ಮಕ ಪರಿಣಾಮವನ್ನು ಉಂಟು ಮಾಡಬಹುದಾಗಿದ್ದು ಈ ಬಗ್ಗೆ ಮಕ್ಕಳ ರಕ್ಷಣೆ ಅವಶ್ಯವಾಗಿರುವುದರಿಂದ ಸರಳವಾಗಿ ಜನಸಾಮಾನ್ಯರಿಗೆ ಕೋವಿಡ್ 19ರ ಮುನ್ನೆಚ್ಚರಿಕೆ ಕ್ರಮಗಳನ್ನು ಮತ್ತು ಆಗಿಂದಾಗ್ಗೆ ಸರಕಾರ ಹೊರಡಿಸುವ ನಿಯಮಾವಳಿಗಳನ್ನು ದಾಟಿಸುವ ಪ್ರಯತ್ನಗಳು ನಡೆಯುತ್ತಿದೆ. ಈ ನಿಟ್ಟಿನಲ್ಲಿ ವಿಶೇಷ ಸಾಹಿತ್ಯ ರಚನೆ ಮತ್ತು ಅನುಷ್ಠಾನವೂ ಅಗತ್ಯವಿದೆಯೆಂದು ಈ ಕುರಿತು ಯೋಜನಾ ಕಾರ್ಯಗಳು ನಡೆಸಬೇಕಾಗಿದೆ.

ಯೋಜನಾ ಕಾರ್ಯಾನುಷ್ಠಾನದಲ್ಲಿ ಆಯ್ದ ಶೈಕ್ಷಣಿಕ ವಿಭಾಗಗಳಲ್ಲಿ ಎಸ್‌ಡಿಎಂಸಿಗಳೊಂದಿಗೆ ಸಂವಹನವನ್ನು ಇಲಾಖಾಧಿಕಾರಿಗಳ ಸಹಕಾರದೊಂದಿಗೆ ನಡೆಸಿ, ಮೂಲ ಅಂಕಿಅಂಶಗಳನ್ನು ಪಡೆಯುವಲ್ಲಿ ಎಲ್ಲಾ ಸಿದ್ಧತೆಗಳನ್ನು ನಡೆಸಲಾಯಿತು. ಅಂಕಿಅಂಶಗಳ ಸಂಗ್ರಹಣೆಯಲ್ಲಿ ಶಾಲಾ ಮಾಹಿತಿಗಳ ಜೊತೆಗೆ ಯೋಜನೆಯ ಮುಖ್ಯ ಉದ್ದೇಶ ಶಿಕ್ಷಣ ಹಕ್ಕು ಕಾಯಿದೆ 2009ರ ಆಯ್ದ ಅಂಶಗಳ ವಾಸ್ತವತೆಯನ್ನು ಕಂಡುಹಿಡಿಯುವಂತೆ ಸೂಚ್ಯಂಕಗಳನ್ನು ಶಿಕ್ಷಣ ಪರಿಣತರೊಂದಿಗೆ ಚರ್ಚಿಸಿ ತಯಾರಿಸಲಾಯಿತು.



ಝೂಮ್ ಮೂಲಕ ನಮ್ಮ ಆಯ್ದ ಕಾರ್ಯಕರ್ತರೊಂದಿಗೆ ಸಂವಹನಗಳನ್ನು ಆಗಿಂದಾಗ್ಗೆ ಮಾಡುತ್ತಾ ಕೋವಿಡ್ 19ರ ಸ್ಥಿತಿಗತಿಗಳು ಮತ್ತು ಎಸ್‌ಡಿಎಂಸಿಗಳನ್ನು ಸಂಧಿಸುವ ರೀತಿ, ಬರಬಹುದಾದ ಸವಾಲುಗಳ ಕುರಿತು ಚರ್ಚೆಗಳನ್ನು ನಡೆಸಲಾಗಿತ್ತು.

ಒಟ್ಟು ಆಯ್ದ 61 ಶಾಲೆಗಳಲ್ಲಿ ಮತ್ತು ಪ್ರತೀ ಕ್ಲಸ್ಟರ್‌ನ 2 ಹೆಚ್ಚುವರಿ ಶಾಲೆಗಳನ್ನು ಆಯ್ದುಕೊಂಡು ವಾಸ್ತವ ಸ್ಥಿತಿಯನ್ನು ಆಯಾ ಪ್ರದೇಶದಿಂದಲೇ ಆಯ್ದುಕೊಂಡ ಸಮೀಕ್ಷಕರನ್ನು ತರಬೇತುಗೊಳಿಸುವುದರ ಮೂಲಕ ಸಿದ್ಧಗೊಳಿಸಲಾಯಿತು.



ನಂತರ ತರಬೇತಿಗೊಳಿಸಿದ ಮುಖ್ಯ ತರಬೇತುದಾರರನ್ನು ಯೋಜನಾ ಪರಿಕಲ್ಪನೆಯ ಅರ್ಥೈಸುವಿಕೆ ಮತ್ತು ಎಸ್‌ಡಿಎಂಸಿ ಸದಸ್ಯರೊಂದಿಗೆ ಒಳಗೊಳ್ಳುವಿಕೆ ಮತ್ತು ಶಾಲಾ ಸ್ಥಿತಿಗತಿಗಳನ್ನು



ತರಬೇತಿಯಲ್ಲಿ ತಿಳಿಸಿದ ಸಾಧನದ ಮೂಲಕ ಮಾಪನ ಮಾಡುವ ನೈಪುಣ್ಯತೆಯನ್ನು ತಿಳಿಯುವ ಪ್ರಕ್ರಿಯೆಗಾಗಿ ಮತ್ತೊಂದಾವರ್ತಿ ಶಾಲೆಗಳನ್ನು ಬೇಟಿ ಮಾಡುವುದು ಮತ್ತು ಸ್ಥಿತಿಗತಿಗಳ ವರದಿಯನ್ನು

ಸಲ್ಲಿಸುವ ಕಾರ್ಯತಂತ್ರವನ್ನು ನಡೆಸಿ, ಆಯ್ದ ಯೋಜನಾ ಮುಖ್ಯ ತರಬೇತುದಾರರು ಸದೃಢರೆಂದು ಖಚಿತಪಡಿಸಿಕೊಳ್ಳಲಾಯಿತು.



ಅವರಿಗೆ ಶಿಕ್ಷಣ ಹಕ್ಕು ಕಾಯಿದೆ 2009ರ ಚರಿತ್ರೆಯ ಅರಿವನ್ನು ಮಾಡುವುದರ ಮೂಲಕ



ಯೋಜನಾ ನಿರ್ದೇಶಕರಾದ ಶ್ರೀ ರೆನ್ನಿ ಡಿಸೋಜರವರು 2020ರ ಈ ಸಮಯದಲ್ಲೂ ಕಾಯಿದೆಯ ಅನುಷ್ಠಾನ ಮಾಡುವಲ್ಲಿ ಇರುವ ಅನೇಕ ಸವಾಲುಗಳನ್ನು ಕುರಿತು ವಿವರಿಸುತ್ತಾ



ಸರಕಾರಿ ಶಾಲೆಗಳಲ್ಲಿ ಮೌಲ್ಯ ಹಾಗೂ ಗುಣಮಟ್ಟದ ಶಿಕ್ಷಣಗಳನ್ನು ನಾವು ನೋಡಬೇಕಾದರೆ ಸರಕಾರದ ಕಾಯಿದೆಗಳನ್ನು ಸರಿಯಾಗಿ ತಿಳಿಯುವುದಯ ಅತೀ ಅಗತ್ಯವೆಂದು ಮನದಟ್ಟು ಮಾಡಿಸುವ ಮೂಲಕ ತರಬೇತಿಯ ಆರಂಭವನ್ನು ಮಾಡಿದರು.



ತರಬೇತು ಸಂಯೋಜಕರಾದ ಶ್ರೀಮತಿ ಕಸ್ತೂರಿಯವರು ಯೋಜನೆಯು ಆಯ್ದುಕೊಂಡ ಶಿಕ್ಷಣ ಹಕ್ಕು ಕಾಯಿದೆಯ 8 ಮುಖ್ಯ




ಅಂಶಗಳನ್ನು ವಿವರಿಸುತ್ತಾ ಸಮೀಕ್ಷಾ ಸಂಧರ್ಭದಲ್ಲಿ ಸಮೀಕ್ಷಕರು ಅರ್ಥೈಸಿಕೊಳ್ಳಬೇಕಾದ ಅಂಶಗಳನ್ನು ತಿಳಿಸುತ್ತಾ ಇದಕ್ಕಾಗಿ ತಯಾರಿಸಿರುವ 19 ನಿಯತಾಂಕಗಳನ್ನು ಮತ್ತು ಪ್ರತೀ ನಿಯತಾಂಕಗಳನ್ನು ಸರಿಯಾಗಿ ಮಾಪನ ಮಾಡುವ ಸಲುವಾಗಿ ಹಾಕಿಕೊಂಡ 4 ಉಪಅಂಶಗಳನ್ನು ವಿವರಿಸಿದರು. ಅದಲ್ಲದೆ 8 ಕ್ಲಸ್ಟರ್‌ಗಳಲ್ಲಿ ಕಾರ್ಯ ನಿರ್ವಹಿಸಲು ಆರ್‌ಟಿಇ ಕಾರ್ಯಕರ್ತರುಗಳ ಆಯ್ಕೆ ಮತ್ತು ಅವರ ಶಾಲೆಗಳನ್ನು ಅಂದೇ ನಿರ್ಧರಿಸಿ ಸಮೀಕ್ಷಾ ಕಾರ್ಯ ವಿಧಾನಗಳು ಮತ್ತು ಆಡಳಿತಾತ್ಮಕ ವಿಚಾರಗಳ ಮಾಹಿತಿಯನ್ನು ನೀಡಿದರು.

ವಾಸ್ತವ ಸ್ಥಿತಿಗತಿ ಅಧ್ಯಯನಕ್ಕಾಗಿ ಸಮೀಕ್ಷೆ ಪ್ರಕ್ರಿಯೆಯು ಸುಮಾರು 30 ಸಮೀಕ್ಷಕರ ತಂಡದೊಂದಿಗೆ ಆರಂಭಗೊಂಡಿತು.

ಇಲ್ಲಿ ಕಂಡುಕೊಂಡ ವಾಸ್ತವಾಂಶಗಳಲ್ಲಿ ಮುಖ್ಯವಾದದ್ದು ಮತ್ತು ಮುಂದಿನ ಯೋಜನೆಗಳಲ್ಲಿ ಗಮನಾರ್ಹವಾಗಿ ಬದಲಾವಣೆ ತರಬೇಕಾದ ಅಂಶಗಳನ್ನು ಇಲಾಖೆಗಳಿಗೆ, ಪ್ರಾಧಿಕಾರಗಳಿಗೆ, ಸಂಬಂಧಪಟ್ಟ ಶಾಲಾಭಿವೃದ್ಧಿ ಸಮಿತಿಗಳಿಗೆ, ಸಮೂಹ ಸಂಪನ್ಮೂಲ ಅಧಿಕಾರಿಗಳು, ಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರುಗಳೊಂದಿಗೆ ಯೋಜನಾ ಸಿಬ್ಬಂದಿಗಳು ಚರ್ಚಿಸಿ, ಬದಲಾವಣೆಗಾಗಿ ಇರುವ ಸವಾಲುಗಳು ಮತ್ತು ಅದನ್ನು ಸರಿಪಡಿಸಲು ಮಾಡಬೇಕಾದ ಕಾರ್ಯತಂತ್ರಗಳನ್ನು ಚರ್ಚಿಸಲಾಯಿತು. ಮಾತ್ರವಲ್ಲದೆ ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನದಲ್ಲಿ ಎಸ್‌ಡಿಎಂಸಿಗಳ ಪಾತ್ರ ಕುರಿತಾಗಿ ನಡೆಸಿದ ಸಮೀಕ್ಷೆಯ ವಿಶ್ಲೇಷಣೆಯ ನಂತರ ಕಂಡುಕೊಂಡ ವಾಸ್ತವಾಂಶಗಳ ಅಧಾರದಲ್ಲಿ ಎಸ್‌ಡಿಎಂಸಿಗಳ ಬಲವರ್ಧನೆಯನ್ನು ನಡೆಸಲು ಮುಖ್ಯ ತರಬೇತುದಾರರನ್ನು ಸಿದ್ಧಗೊಳಿಸುವ ಪ್ರಕ್ರಿಯೆಯ ಆರಂಭವಾಗಿ ಯೋಜನೆಯಲ್ಲಿ ಯೋಜಿಸಿದಂತೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರಿಗಾಗಿ **'ಮಾರ್ಗದರ್ಶಿ 2020–2023'** ತರಬೇತಿ ಕೈಪಿಡಿಯ ಮೊದಲ ಪ್ರವೇಶಿಕೆ – ನಮ್ಮ ಕನಸಿನ ಶಾಲೆ ಹೇಗಿರಬೇಕು ಅನ್ನುವ ತರಬೇತಿಯನ್ನು ನೀಡಲಾಯಿತು. ಆರಂಭದ ತರಬೇತಿಯ ಉದ್ಘಾಟನೆಗೆ ಮುಖ್ಯ ಅತಿಥಿಯಾಗಿ ಶಿಕ್ಷಣ ಇಲಾಖೆಯ ಸಮನ್ವಯಾಧಿಕಾರಿಯಾದ ಶ್ರೀಮತಿ ದಯಾವತಿಯವರು ಆಗಮಿಸಿದ್ದರು. ಸಂಬಂಧಪಟ್ಟ ಶಾಲಾಭಿವೃದ್ಧಿ

ಸಮಿತಿಗಳಿಗೆ, ಸಮೂಹ ಸಂಪನ್ಮೂಲ ಅಧಿಕಾರಿಗಳು, ಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರುಗಳೊಂದಿಗೆ ಯೋಜನಾ ಸಿಬ್ಬಂದಿಗಳು ಚರ್ಚಿಸಿ, ಬದಲಾವಣೆಗಾಗಿ ಇರುವ ಸವಾಲುಗಳು ಮತ್ತು ಅದನ್ನು ಸರಿಪಡಿಸಲು ಮಾಡಬೇಕಾದ ಕಾರ್ಯತಂತ್ರಗಳನ್ನು ಚರ್ಚಿಸಲಾಯಿತು. ಮಾತ್ರವಲ್ಲದೆ ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನದಲ್ಲಿ ಎಸ್‌ಡಿಎಂಸಿಗಳ ಪಾತ್ರ ಕುರಿತಾಗಿ ನಡೆಸಿದ ಸಮೀಕ್ಷೆಯ ವಿಶ್ಲೇಷಣೆಯ ವರದಿಯನ್ನು ಮುಖ್ಯ ತರಬೇತುದಾರರಿಗೆ ಅರ್ಥೈಸಿಕೊಡಲಾಯಿತು ಮತ್ತು ಇವನ್ನು ಪ್ರತೀ ಭೇಟಿ ಸಂದರ್ಭದಲ್ಲಿ ಗಮನದಲ್ಲಿರಿಸಿಕೊಳ್ಳಬೇಕು ಅನ್ನುವುದನ್ನು ತಿಳಿಸಲಾಯಿತು.

ಈ ಸಂದರ್ಭದಲ್ಲಿ ಭಾಗಿದಾರರು ಡೆಮೋ ಮೂಲಕ ತರಬೇತಿಯನ್ನು ಗುಂಪು ಚಟುವಟಿಕೆಯನ್ನು ಮಾಡುವುದರ ಮೂಲಕ ತರಬೇತಿ ಸಾಮರ್ಥ್ಯವನ್ನು ಪ್ರಸ್ತುತಿ ಪಡಿಸಿದರು. 2020–2021 ಯೋಜನೆಯಲ್ಲಿ ಹೊರತಂದಿರುವ ಪೋಸ್ಟರ್‌ಗಳನ್ನು ತೋರಿಸಿ ಚಿತ್ರಗಳ ಮೂಲಕ, ಶಾಲಾ ಮೂಲಭೂತ ಸೌಕರ್ಯಗಳ, ಮಕ್ಕಳ ಕಲಿಕೆ ಮೇಲುಸ್ತುವಾರಿ, ಆರೋಗ್ಯ, ರಕ್ಷಣೆ ಕುರಿತಾಗಿ ಮತ್ತು ಶಾಲಾ ಶಿಕ್ಷಕರು, ಸಮುದಾಯ ಪೋಷಕರ ಕರ್ತವ್ಯಗಳ ಕುರಿತಾಗಿ ತಿಳಿಸುವುದಾಗಿತ್ತು.

ಪ್ರತೀ ಶಾಲೆಗಳಲ್ಲಿನ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ 2020ರ ವಾಸ್ತವ ಸ್ಥಿತಿಗತಿಗಳ ಅನಂತರ ಯೋಜನಾ ಸಿಬ್ಬಂದಿಗಳು, ಯೋಜನಾ ಪರಿಕಲ್ಪನೆಯನ್ನು ಅರ್ಥೈಸಿಕೊಂಡ ಪಡಿ ಆರ್‌ಟಿಇ ಕಾರ್ಯಕರ್ತರ ನಿರಂತರ ಸಂವಹನ ಸಮಾಲೋಚನೆಗಳಿಂದಾಗಿ ಎಸ್‌ಡಿಎಂಸಿ ಸದಸ್ಯರ ಯೋಚನೆಗಳಲ್ಲಿ ಅನೇಕ ಬದಲಾವಣೆಗಳನ್ನು ಕಂಡುಕೊಳ್ಳಲಾಯಿತು. ತಮ್ಮ ಶಾಲೆಯಲ್ಲಿ ಆಗಬೇಕಾದ ಬದಲಾವಣೆಗಳನ್ನು ಈಗಾಗಲೇ ಅರಿತಿದ್ದರು. ತರಬೇತಿ ನಡೆದ ನಂತರ ನಿರ್ದಿಷ್ಟ ಕ್ರಿಯಾ ಯೋಜನೆಗಳನ್ನು ತಯಾರಿಸಿ ತಮ್ಮ ಶಾಲೆಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ಮಕ್ಕಳ ಕಲಿಕೆ ಹಾಜರಾತಿಗಳ ಮೇಲ್ವಿಚಾರಣೆ, ಮಕ್ಕಳ ರಕ್ಷಣೆ ಆರೋಗ್ಯ ಹಾಗೂ ಪೋಷಣೆಗಳ ಕುರಿತಾಗಿಯೂ ದೀರ್ಘವಾಗಿ ಶಿಕ್ಷಕರು, ಮಕ್ಕಳು, ಸಮಿತಿ ಸದಸ್ಯರು ಸಮೂಹ ಸಂಪನ್ಮೂಲ ವ್ಯಕ್ತಿಗಳ ಉಪಸ್ಥಿತಿಯಲ್ಲಿ ತಯಾರಿಸಿದ್ದರು ***(ಮುಂದಿನ ಪುಟದಲ್ಲಿ ಸಂಬಂಧಿಸಿದ ಚಿತ್ರಗಳನ್ನು ನೋಡಬಹುದು)***

ಇದೇ ಸಂದರ್ಭಕ್ಕಾಗಿ ಸಂಸ್ಥೆಯ ಸಿಬ್ಬಂದಿಗಳು ಯೋಜನೆಯ ಅನುಷ್ಠಾನದಲ್ಲಿ ಇಲಾಖೆಯ ಸಹಕಾರಕ್ಕಾಗಿ ವಕಾಲತು ನಡೆಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಮೂಹ ಸಂಪನ್ಮೂಲ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಮುಖತಃ ಸಂದರ್ಶಿಸಿ, ಯೋಜನೆಯ ಕಾರ್ಯ ಚಟುವಟಿಕೆಗಳು ಮತ್ತು ಬದಲಾವಣೆಗೆ ಪೂರಕ ಅಗತ್ಯತೆಗಳು ಮತ್ತು ಇಲಾಖೆಗಳಿಂದ ನಿರೀಕ್ಷಿಸುವ ಸಹಕಾರದ ಕುರಿತಾಗಿ ಚರ್ಚೆಗಳನ್ನು ಮಾಡಿರುತ್ತಾರೆ. ಹೀಗಾಗಿ ಇಲಾಖೆಗಳ ಅಧಿಕಾರಿಗಳ ಸಕಾರಾತ್ಮಕ ಸಹಕಾರದೊಂದಿಗೆ ಯೋಜನೆಯ ಚಟುವಟಿಕೆಗಳು ಆರಂಭಗೊಂಡವು.



## ಯೋಜನೆಯು ಸ್ಥಳೀಯ ಸರಕಾರಗಳೊಂದಿಗೆ ನಡೆಸಿದ ಪ್ರಯತ್ನಗಳು:–

ಶಿಕ್ಷಣ ಹಕ್ಕು ಕಾಯಿದೆ 2009ರ ಸಮರ್ಪಕ ಅನುಷ್ಠಾನದಲ್ಲಿ ಆರಂಭದಲ್ಲಿ ತಿಳಿಸಿದಂತಹ ಆಯ್ದ ಒಟ್ಟು 24 ಸ್ಥಳೀಯ ಸರಕಾರಗಳಲ್ಲಿ ಸದಸ್ಯರ ಪಾತ್ರಗಳ ನಿರ್ವಹಣೆಯ ವಾಸ್ತವ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ಸಮೀಕ್ಷೆಯನ್ನು ನಡೆಸುವಂತೆ, ಎರಡೂ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಾಹಕರಲ್ಲಿ ಸಂವಹನಗಳನ್ನು, ಯೋಜನೆಯ ಕರಡು ಮತ್ತು ಕ್ರಿಯಾ ಚಟುವಟಿಕೆಗಳನ್ನು ಮತ್ತು ಯೋಜನೆಯ ನಿರೀಕ್ಷೆಗಳನ್ನು ಮಂಡಿಸಿ ಅವರ ಸಹಕಾರದೊಂದಿಗೆ ಯಶಸ್ವಿಯಾಗಿ ಸಮೀಕ್ಷೆಯನ್ನು ನಡೆಸಲಾಯಿತು.

ಸಮೀಕ್ಷೆಯಲ್ಲಿ ಕಂಡುಕೊಂಡ ವಾಸ್ತವಾಂಶಗಳ ವಿಶ್ಲೇಷಣಾ ವರದಿಯನ್ನು ಸ್ಥಳೀಯ ಸರಕಾರಗಳ ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ) ಮತ್ತು ಯೋಜನಾ ವ್ಯಾಪ್ತಿಯ ಭಾಗಿದಾರರು, ಸಂಪನ್ಮೂಲ ವ್ಯಕ್ತಿಗಳ ತಂಡ ಸಮುದಾಯದ ಅಭಿವೃದ್ಧಿಯಲ್ಲಿ ಆಸಕ್ತರು ಎಲ್ಲರನ್ನೂ ಸೇರಿಸಿ ಚರ್ಚೆಗಳನ್ನು ನಡೆಸಲಾಯಿತು. ನಂತರದಲ್ಲಿ ಯೋಜನೆಯ ನಿರೀಕ್ಷಿತ ಫಲಿತಾಂಶಗಳನ್ನು ಕಾಣಲು ಅಂಶಗಳನ್ನು ಈ ಕೆಳಕಂಡಂತೆ ಪರಿಗಣಿಸಲಾಯಿತು.

1. ಶಿಕ್ಷಣ ಹಕ್ಕು ಕಾಯಿದೆ, ಮಗುಸ್ನೇಹಿ ಪರಿಕಲ್ಪನೆಯ ಬಗ್ಗೆ ಪಂಚಾಯತ್ ಸದಸ್ಯರಲ್ಲಿ ಅವರ ವ್ಯಾಪ್ತಿಯ ಶಿಕ್ಷಕರಲ್ಲಿ, ಎಸ್‌ಡಿಎಂಸಿ, ಪೋಷಕರಲ್ಲಿ ಹಾಗೂ ಸಮುದಾಯದಲ್ಲಿ ಅರಿವಿನ ಕಾರ್ಯಕ್ರಮಗಳ ಅಗತ್ಯತೆ.
2. ಇದಕ್ಕಾಗಿ ಸಂಬಂಧಪಟ್ಟ ಇಲಾಖೆಗಳಲಿ ವಕಾಲತು ನಡೆಸಿ, ಜತೆಜತೆಯಾಗಿ ಕಾರ್ಯಕ್ರಮಗಳ ರೂಪುರೇಷೆಗಳನ್ನು ಮಾಡುವುದು.
3. ಕಾರ್ಯ ಯೋಜನೆಯ ಅನುಷ್ಠಾನಕ್ಕಾಗಿ ಬೇಕಾಗುವ ಮಾಹಿತಿ ಕರಪತ್ರಗಳು, ಇತರ ಮೂಲಗಳನ್ನು (ಪೋಸ್ಟರ್, ಗೋಡೆ ಬರಹ, ಭಿತ್ತಿಪತ್ರ), ತರಬೇತಿ ಕೈಪಿಡಿ, ಇನ್ನಿತರ ಪರಿಕರಗಳ ತಯಾರಿಗಳ ಅಗತ್ಯತೆ.
4. ತರಬೇತಿಗಾಗಿ ಸಂಪನ್ಮೂಲ ವ್ಯಕ್ತಿಗಳನ್ನು ಸಿದ್ಧಗೊಳಿಸುವುದು ಮತ್ತು ಲಭ್ಯಗೊಳಿಸುವುದು.
5. ಪ್ರತೀ 3 ತಿಂಗಳಿಗೊಮ್ಮೆ ಈ ಕುರಿತಾಗಿ ಸಮಾಲೋಚನೆಗಳನ್ನು ಪ್ರಾಧಿಕಾರಗಳು ಮತ್ತು ಅಧಿಕಾರಿಗಳೊಂದಿಗೆ ನಡೆಸಿ, ವರದಿಗಳನ್ನು ದಾಖಲಿಸುವುದು ಮತ್ತು ನಿರ್ವಹಣೆ ಮಾಡುವುದು ಅಂದರೆ ಗ್ರಾಮ, ತಾಲೂಕು, ಜಿಲ್ಲೆ ಹಾಗೂ ರಾಜ್ಯ ಹಂತದವರೆಗೆ ತಲುಪಿಸುವುದು ಮತ್ತು ಅವರ ಸಹಯೋಗವನ್ನು ನಿರೀಕ್ಷಿಸುವುದು ಮತ್ತು ಪಡೆಯುವುದು.
6. ಕನಿಷ್ಟ 6 ತಿಂಗಳಿಗೊಮ್ಮೆ ಶಿಕ್ಷಣ ಹಕ್ಕು ಕಾಯಿದೆಯ ಸಮರ್ಪಕ ಅನುಷ್ಠಾನದ ಅನುಸರಣೆಗಾಗಿ ಸ್ಥಳೀಯ ಮಟ್ಟದಲ್ಲಿ ಪಂಚಾಯತ್ ರಾಜ್ ಇಲಾಖೆ ಹಾಗೂ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ತರಬೇತಿಯ ಮೌಲ್ಯಮಾಪನ ನಡೆಸುವುದು. ಅಲ್ಲದೆ ಪ್ರಗತಿ ವರದಿಯನ್ನು ದಾಖಲಿಸುವುದು. ಸಭೆಯ ಅನುಸರಣೆಗಾಗಿ ಜಿಲ್ಲಾ ಮಟ್ಟದಲ್ಲಿ ವಕಾಲತು ನಡೆಸುವುದು ಮತ್ತು ಕ್ರಿಯಾ ಯೋಜನೆ ತಯಾರಿಸುವುದು.
7. ಶಿಕ್ಷಣ ಹಕ್ಕು ಕಾಯಿದೆ ಮತ್ತು ಮಗುಸ್ನೇಹಿ ಪಂಚಾಯತ್ ಸಂಬಂಧಿಸಿ ಎಲ್ಲಾ ಜವಾಬ್ದಾರಿಗಳ ಮತ್ತು ಇದರ ಅನುಷ್ಠಾನಕ್ಕಾಗಿ ನಡೆಸುವ ಕಾರ್ಯ ಚಟುವಟಿಕೆಗಳ ಮೇಲ್ವಿಚಾರಣಾ ಪ್ರಕ್ರಿಯೆಗಳ ಅವಲೋಕನದ ಅಗತ್ಯತೆ.
8. ಸ್ಥಳೀಯ ಸರಕಾರಗಳ ಯೋಜನೆಯ ಪ್ರಕ್ರಿಯೆಯಲ್ಲಿ ಕಂಡುಕೊಂಡ ಸಾಧಕಬಾಧಕಗಳ ಬಗ್ಗೆ ಚರ್ಚೆಯನ್ನು ನಡೆಸಲು ಪೂರಕ ವೇದಿಕೆಯನ್ನು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್‌ಗಳು ವ್ಯವಸ್ಥೆ ಮಾಡುವುದು ಮತ್ತು ಕಾಲಕಾಲಕ್ಕೆ ಸಲಹೆ ಮಾರ್ಗದರ್ಶನ ಸಹಕಾರಗಳನ್ನು ನೀಡುವುದು.



ಪಡಿ ಯೋಜನೆಯು ಈ ಕುರಿತಾಗಿ ಸ್ಥಳೀಯ ಸರಕಾರಗಳ ಸಮಿತಿಗಳಿಗೆ ಮುಖ್ಯವಾಗಿ 4 ಹಂತದ ತರಬೇತಿಗಳನ್ನು ಯೋಜಿಸಿದ್ದು, ಈ ಮೂಲಕ ನಿರೀಕ್ಷಿತ ಫಲಿತಾಂಶಗಳನ್ನು ಕಂಡುಕೊಳ್ಳಲು ಪ್ರಯತ್ನಗಳನ್ನು ಮಾಡುವುದು.

1. ಶಿಕ್ಷಣ ಹಕ್ಕು ಕಾಯಿದೆ ಮತ್ತು ಸ್ಥಳೀಯ ಸರಕಾರಗಳ ಜವಾಬ್ದಾರಿಗಳು

2. ಸುಸ್ಥಿರ ಅಭಿವೃದ್ಧಿ ಗುರಿಗಳು 2030 – ಮಕ್ಕಳು ಮತ್ತು ಸ್ಥಳೀಯ ಸರಕಾರ

3. ಮಕ್ಕಳ ಹಕ್ಕುಗಳು ಮತ್ತು ಮಕ್ಕಳಿಗಾಗಿ ಇರುವ ಕಾಯ್ದೆ ಹಾಗೂ ಕಾನೂನುಗಳ ಪರಿಚಯ

4. ಗ್ರಾಮ ಪಂಚಾಯತ್ ಮತ್ತು ಮಕ್ಕಳ ಅಭಿವೃದ್ಧಿಪರ ಕ್ರಿಯಾ ಯೋಜನೆ ತಯಾರಿಯ ಅಗತ್ಯತೆ ಮತ್ತು ಅನುಸರಣೆಯ ವಿಧಾನಗಳು.

ಈ ಮೇಲ್ಕಂಡ ಅಂಶಗಳನ್ನು ಪಡಿ ಯೋಜನೆ 2020–2023ರ ಯೋಜನೆಯ ಕ್ರಿಯಾ ಯೋಜನೆಯಾಗಿ ಸಿದ್ಧಗೊಳಿಸಲಾಯಿತು. ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಅಧಿಕಾರಿಗಳೊಂದಿಗೆ ಸಮಾಲೋಚನೆಗಳನ್ನು ನಡೆಸಿ ನಂತರ ಕ್ರಿಯಾಯೋಜನೆಗಳನ್ನು ಮಂಡಿಸಿ, ಅವರ ಸಂಪೂರ್ಣ ಸಹಕಾರದ ಮೂಲಕ ಯೋಜನೆಯ ಅನುಷ್ಠಾನಕ್ಕಾಗಿ 2 ಜಿಲ್ಲೆಗಳಲ್ಲಿ ಮೊದಲ ಹಂತವಾಗಿ ಸ್ಥಳೀಯ ಸರಕಾರದ ಸಮಿತಿ ಸದಸ್ಯರುಗಳಿಗೆ ಆಯಾಯ ಪಂಚಾಯತ್/ಪುರ/ನಗರ ಸಭೆಗಳಲ್ಲಿ ತರಬೇತಿಗಳನ್ನು ಯೋಜನೆ ಮಾಡಲಾಯಿತು.

ನಂತರ ಪ್ರತೀ ಪಂಚಾಯತ್/ಸ್ಥಳೀಯ ಸರಕಾರಗಳಲ್ಲಿರುವ ಎಲ್ಲಾ ಸದಸ್ಯರುಗಳಿಗೆ ಶಿಕ್ಷಣ ಹಕ್ಕು ಕಾಯಿದೆಯನ್ವಯ ಹಾಗೂ ಪಂಚಾಯತ್ ರಾಜ್ ಕಾಯಿದೆಯನ್ವಯ ಶಿಕ್ಷಣ, ಮಕ್ಕಳ ಹಕ್ಕುಗಳು, ರಕ್ಷಣೆ ಹಾಗೂ ಪೋಷಣೆಯಲ್ಲಿ ಅವರ ಜವಾಬ್ದಾರಿಗಳೇನು ಅನ್ನುವುದನ್ನು ಅರ್ಥೈಸಲು ಪೂರಕ ತರಬೇತಿ ಕೈಪಿಡಿಯೊಂದನ್ನು ತಯಾರಿಸಲಾಯಿತು. ಎರಡೂ ಜಿಲ್ಲೆಗಳಲ್ಲಿ ಈಗಾಗಲೆ ನುರಿತ ಸಂಪನ್ಮೂಲ ವ್ಯಕ್ತಿಗಳಿಗೆ 'ತರಬೇತುದಾರರ ತರಬೇತಿ'ಯನ್ನು ನೀಡಲಾಯಿತು. ಈ ತರಬೇತುದಾರರು ವಿಷಯದಲ್ಲಿ ನೈಪುಣ್ಯತೆಯ ಮಟ್ಟ ಹಾಗೂ ಉತ್ತಮ ತರಬೇತುದಾರರು ಎಂಬುದರ ಮೂಲಕ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯನ್ನು ತರಬೇತಿ ಕೈಪಿಡಿಯ ಮಾಹಿತಿಯನ್ನು ಡೆಮೋಪ್ರಸ್ತುತಿಯ ಮೂಲಕ ಮಾಡಿ ಒಟ್ಟು ಸಂಪನ್ಮೂಲ ವ್ಯಕ್ತಿಗಳನ್ನು ಆರಿಸಿಕೊಂಡು

ತರಬೇತಿಯ ಸಮಯದಲ್ಲಿ ಪ್ರತೀ ಗ್ರಾಮ ಪಂಚಾಯತ್ ಮಕ್ಕಳ ಶಿಕ್ಷಣ, ರಕ್ಷಣೆ ಮತ್ತು ಪೋಷಣೆಯಲ್ಲಿ ತಮ್ಮನ್ನು ಯಾವ ರೀತಿಯಾಗಿ ತೊಡಗಿಸಿಕೊಳ್ಳುವುದು, ತಮ್ಮ ಕಾರ್ಯವೈಖರಿಗಳನ್ನು ಯಾವ ರೀತಿ ಅನುಪಾಲನೆ ಮಾಡುವುದು, ಮೇಲುಸ್ತುವಾರಿ ಮಾಡುವುದರ ಮೂಲಕ ಶಿಕ್ಷಣ ಹಕ್ಕು ಕಾಯಿದೆಯ ಸಮರ್ಪಕ ಅನುಷ್ಠಾನವನ್ನು ಮಾಡುತ್ತಾ ಸಶಕ್ತ ಅಭಿವೃದ್ಧಿ ಗುರಿಗಳು 2030ರೆಡೆ ದಾಪುಗಾಲನ್ನು ಹಾಕುವ ಕ್ರಿಯಾ ಯೋಜನೆಯನ್ನು ತಯಾರಿಸಿರುವರು.

ಯೋಜನಾ ಸಿಬ್ಬಂದಿಗಳು ಕಾಲಕಾಲಕ್ಕೆ ಈ ಕ್ರಿಯಾ ಯೋಜನೆಯನ್ನು ಪುನರ್‌ಪರಿಶೀಲನೆಯನ್ನು ಮಾಡುವ ತಾಂತ್ರಿಕ ಕರಡನ್ನು ತಯಾರಿಸಿ ಈಗಾಗಲೇ ಪುನರ್‌ಪರಿಶೀಲನೆಯನ್ನು ನಡೆಸಿ, ಸದೃಢರಾಗಿ ಮುನ್ನಡೆಯುವ ಸಲಹೆಗಳನ್ನು ಸಂಸ್ಥೆಯ ಪರವಾಗಿ ನೀಡುತ್ತಿದ್ದಾರೆ.



ಈ ಯೋಜನೆಯು ಎಸ್‌ಡಿಎಂಸಿ ಹಾಗೂ ಸ್ಥಳೀಯ ಸರಕಾರಗಳ ಸದಸ್ಯರುಗಳನ್ನು ಬಲಪಡಿಸುವಲ್ಲಿ ಯೋಜಿಸಿದ ತರಬೇತಿಗಳಲ್ಲಿ ಮಾಹಿತಿಗಳ ಸುಲಭ ಅರ್ಥೈಸುವಿಕೆಗಾಗಿ ಶಿಕ್ಷಣ ಹಕ್ಕು ಕಾಯಿದೆ 2009 ಮತ್ತು ಪಂಚಾಯತ್‌ರಾಜ್ ಕಾಯಿದೆಯಲ್ಲಿ ಉಲ್ಲೇಖಿಸಿರುವಂತಹ ಜವಾಬ್ದಾರಿಗಳು ಮತ್ತು ಪಾತ್ರಗಳ ವ್ಯಾಖ್ಯಾನವನ್ನು ಉಲ್ಲೇಖಿಸಿ, ಮಗುಸ್ನೇಹಿಯಾಗಿ ಚಿಂತನೆ ಮಾಡುವ ಮತ್ತು ಅದಕ್ಕಾಗಿ ಕಾರ್ಯಾಚರಿಸುವ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಮತ್ತು ಸ್ಥಳೀಯ ಸರಕಾರಗಳ ಪ್ರತಿನಿಧಿಗಳಿಗೆ ಭಿತ್ತಿಪತ್ರ/ ಪೋಸ್ಟರ್‌ಗಳನ್ನು ತಯಾರಿಸಿ ಮುದ್ರಣ ಮಾಡಿ ಮುಖ್ಯ ತರಬೇತುದಾರರು ಮತ್ತು ಸಂಪನ್ಮೂಲ ವ್ಯಕ್ತಿಗಳು ತರಬೇತಿ ನೀಡುವ ಸಂಧರ್ಭದಲ್ಲಿ ಉಪಯೋಗಿಸಲು ಮತ್ತು ಶಾಲೆಗಳಲ್ಲಿ ಗ್ರಾಮ ಪಂಚಾಯತ್/ ಸ್ಥಳೀಯ ಸರಕಾರದ ಕಛೇರಿಗಳು ಮತ್ತು ಅಂಗನವಾಡಿ ಹಾಗೂ ಸಮುದಾಯವು ವೀಕ್ಷಿಸಲು ಸಹಾಯವಾಗುವಂತೆ ಮುಖ್ಯ ಸ್ಥಳಗಳಲ್ಲಿ ಪ್ರದರ್ಶಿಸುವದಕ್ಕಾಗಿ ನೀಡಲಾಗಿದೆ.

ಜಿಲ್ಲೆ ಹಾಗೂ ರಾಜ್ಯಮಟ್ಟದಲ್ಲಿ ಶಿಕ್ಷಣ ಇಲಾಖೆಗಳು ಹಾಗೂ ಗ್ರಾಮ ಪಂಚಾಯತ್/ ಸ್ಥಳೀಯ ಸರಕಾರಗಳ ಯೋಜನೆಗಳ. ಅನುಷ್ಠಾನಕ್ಕಾಗಿ ವಿವಿಧ ಹಂತಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ನಡೆಸಿ ವಕಾಲತುಗಳ ಮೂಲಕ ಇಲಾಖಾ ಸಹಕಾರಗಳು ಯೋಜನೆಯ ಅನುಷ್ಠಾನದಲ್ಲಿ ಬಹಳಷ್ಟು ಪ್ರೋತ್ಸಾಹ ನೀಡಿದವು.





ಅದೇ ರೀತಿ ಮೂಲ ಸ್ಥಿತಿಗತಿಯ ಸಂಶೋಧನಾ ವರದಿಯ ಮುಖ್ಯ ಅಂಶಗಳನ್ನು ಆಧಾರವಾಗಿಸಿ, ಸ್ಥಳೀಯ ಸರಕಾರಗಳ ಮೂಲಕ ಶಿಕ್ಷಣ ಹಕ್ಕು ಕಾಯಿದೆ 2009ನ್ನು ಪರಿಣಾಮಕಾರಿಯಾಗಿ ಅನುಷ್ಠಾನಿಸುವಂತೆ, ಮುಖ್ಯವಾಗಿ




ಸರಕಾರವು ತಮ್ಮ ಬಜೆಟ್‌ನಲ್ಲಿ ಮಕ್ಕಳ ಶಿಕ್ಷಣ, ರಕ್ಷಣೆ, ಪೋಷಣೆ ಇವುಗಳ ಮುಖ್ಯ ಯೋಜನೆಯಾಗಿ ನಿರ್ಧರಿಸಬೇಕು. ಈ ನಿಟ್ಟಿನಲ್ಲಿ ಗ್ರಾಮ, ತಾಲೂಕು, ಜಿಲ್ಲೆ ಹಾಗೂ ರಾಜ್ಯ ಹಂತಗಳಲ್ಲಾಗಬೇಕಾದ ಪ್ರಯತ್ನ ಮತ್ತು ಯೋಜನೆಗೆ ಸಹಕಾರ ಕೋರಿ ಪ್ರಸ್ತಾವನೆಯನ್ನು ನೀಡಲಾಗಿದೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಈಗಾಗಲೆ ಯೋಜನೆಯೊಂದಿಗೆ ಕೈಜೋಡಿಸಿ ಜೊತೆಜೊತೆಯಾಗಿ ಕ್ರಿಯಾಯೋಜನೆಯನ್ನು ನಿರ್ವಹಿಸಲು ಸಹಕಾರವನ್ನು ನೀಡುತ್ತಿರುವುದು ಸಂತೋಷಕರ ವಿಚಾರವಾಗಿದೆ.



ಪಡಿಯಲ್ಲಿ ವಿಷಯಾಧಾರಿತವಾಗಿ ನುರಿತ ಆಯ್ದ ಸಂಪನ್ಮೂಲ ವ್ಯಕ್ತಿಗಳು 18 ಸ್ಥಳೀಯ ಸರಕಾರಗಳು/ಗ್ರಾಮ ಪಂಚಾಯತ್‌ಗಳಲ್ಲಿ ಪಂಚಾಯತ್ ಸದಸ್ಯರಿಗೆ ತರಬೇತಿಗಳನ್ನು ನೀಡಿದರು. ಪ್ರತೀ ತರಬೇತುದಾರರೊಂದಿಗೆ ಸಂಸ್ಥೆಯ ಪ್ರತಿನಿಧಿಗಳು ಉಪಸ್ಥಿತರಿದ್ದು, ಸರಿಯಾದ ಮಾಹಿತಿಯನ್ನು ತಲುಪಿಸುವಲ್ಲಿ ಸಂಪೂರ್ಣ ಪ್ರಯತ್ನವನ್ನು ಮಾಡಿರುತ್ತಾರೆ.

ತರಬೇತಿಯ ಸಂದರ್ಭದಲ್ಲಿ ಪ್ರತೀ ಗ್ರಾಮ ಪಂಚಾಯತ್‌ಗಳಲ್ಲಿ ಯೋಜನಾ

ಕಾರ್ಯಾನುಷ್ಠಾನಕ್ಕೆ ಸಂಬಂಧಿಸಿ ಕ್ರಿಯಾ ಯೋಜನೆಗಳನ್ನು ಗ್ರಾಮ ಪಂಚಾಯತ್ ಸದಸ್ಯರೇ ತಮ್ಮ ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಠಾನಿಸುವಂತೆ ತಯಾರಿಸುವಲ್ಲಿ ತರಬೇತು ನೀಡಿದರು.

ನಂತರ ಈ ಕ್ರಿಯಾ ಯೋಜನೆಯು ಸರಿಯಾದ ನೆಲೆಯಲ್ಲಿ ನಡೆಯುತ್ತಿದೆಯೋ ಎಂಬುದರಲ್ಲಿ ಪುನರ್‌ಪರಿಶೀಲನೆ ನಡೆಸುವಲ್ಲಿ ಕೂಡ ಅವರೊಂದಿಗೆ ಚರ್ಚೆಗಳು ನಡೆದು ಸಂಪನ್ಮೂಲ ವ್ಯಕ್ತಿಗಳನ್ನೂ ಈ ನೆಲೆಯಲ್ಲಿ ತರಬೇತುಗೊಳಿಸಲಾಯಿತು. ಯೋಜನಾ ಸಿಬ್ಬಂದಿಗಳು ಈ ನೆಲೆಯಲ್ಲಿ ನಿರಂತರವಾಗಿ ಸಂವಹನಗಳನ್ನಿರಿಸಿಕೊಂಡು ಸೂಕ್ತ ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡುತ್ತಿದ್ದಾರೆ.

ಯೋಜನಾ ಪ್ರಕ್ರಿಯೆಯಲ್ಲಿ 4 ವಿಭಾಗದ 8 ಜಿಲ್ಲೆಗಳಲ್ಲೂ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಮಾನ ಮನಸ್ಕ ಸಂಸ್ಥೆಗಳ ನೆಟ್‌ವರ್ಕ್‌ಗಳನ್ನು ಸಂಯೋಜಿಸಿಕೊಂಡು ವಕಾಲತು ಸಮಾಲೋಚನೆಗಳನ್ನು ಅವರೊಂದಿಗೆ ನಡೆಸಿಕೊಂಡು, ಶಿಕ್ಷಣ ಹಕ್ಕು ಕಾಯಿದೆ ಅನುಷ್ಠಾನದಲ್ಲಿನ ವಾಸ್ತವ ಸ್ಥಿತಿಗತಿಗಳು, ಸವಾಲುಗಳು ಅಲ್ಲದೆ, ಅದರಿಂದ ಹೊರಬರಲು ಮಾಡಿಕೊಳ್ಳಬೇಕಾದ ಕಾರ್ಯತಂತ್ರಗಳ ಕುರಿತಾಗಿ ಆಗಿಂದಾಗ್ಗೆ ಅವರೊಂದಿಗೆ ಚರ್ಚೆಗಳನ್ನು ಆಯಾಯ ಜಿಲ್ಲೆಗಳಲ್ಲಿ ನಡೆಸುತ್ತಿದೆ.

ಈ ಸಂಧರ್ಭದಲ್ಲಿ ವಕಾಲತ್ತು ಎಂದರೇನು ಯಾಕಾಗಿ ಈ ವಕಾಲತುಗಳನ್ನು ನಡೆಸಬೇಕು ಮತ್ತು ಇಲಾಖೆಗಳು ಮತ್ತು ಅನುಸರಣೆಗಳನ್ನು ಮಾಡುವ ವಿಧಾನ, ವಕಾಲತುಗಳಿಗಾಗಿ ವಿಷಯಗಳನ್ನು ಅರ್ಥೈಸಿಕೊಂಡು ಹೋಗಬೇಕಾದ ರೀತಿ ಈ ಎಲ್ಲಾ ಅಂಶಗಳ ಕುರಿತಾಗಿ 2 ದಿನಗಳ ಸಂಪೂರ್ಣ ತರಬೇತಿಯನ್ನು ಯೋಜನಾ ಭಾಗಿದಾರರಿಗೆ ನೀಡಲಾಗಿದೆ. ರಾಜ್ಯ ಮಟ್ಟದಲ್ಲಿ ಈ ಕುರಿತಾಗಿ ಅನುಭವ ಹೊಂದಿರುವ ಚೈಲ್ಡ್‌ರೈಟ್ ಟ್ರಸ್ಟ್‌ನ ನಿರ್ದೇಶಕರಾದ ಶ್ರೀ ವಾಸುದೇವ ಶರ್ಮರವರು ಆಗಮಿಸಿದ್ದರು.



ರಾಜ್ಯಮಟ್ಟದಲ್ಲಿನ ಮಕ್ಕಳ ಶಿಕ್ಷಣ ರಕ್ಷಣೆ ಮತ್ತು ಪೋಷಣೆಗಾಗಿ ಕಾರ್ಯಾಚರಿಸುವ ಪ್ರಾಧಿಕಾರ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರೊಂದಿಗೆ ಆಗಿಂದಾಗ್ಗೆ ಸಂವಹನ ಹಾಗೂ ಭೇಟಿಗಳನ್ನು ನೀಡಲಾಗಿದೆ. ಮಕ್ಕಳ ರಕ್ಷಣೆ, ಶಿಕ್ಷಣ ಮತ್ತು ಪೋಷಣೆಯೆಡೆ ಶಾಲೆಗಳಲ್ಲಿ ಮತ್ತು ಸ್ಥಳೀಯ ಸರಕಾರಗಳಲ್ಲಿ ಇರುವ ಗೊಂದಲಗಳು ಮತ್ತು ಸವಾಲುಗಳ ಕುರಿತು ಸಂಸ್ಥೆ ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನ ಕುರಿತಾಗಿ ಕಾರ್ಯ ನಿರ್ವಹಿಸುವ ಸಮಾನ ಮನಸ್ಕ





ಸಂಘಟನೆಗಳನ್ನೊಳಗೂಡಿಸಿಕೊಂಡು ರಾಜ್ಯ ಮಟ್ಟದಲ್ಲಿ ಸಮಾಲೋಚನಾ ಕಾರ್ಯಾಗಾರವನ್ನು ಆಯೋಜಿಸಿದ್ದು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾಸ ಡಾ ಅಂಟೋನಿ ಸೆಬೆಸ್ಟಿಯನ್‌ರವರು ಮುಖ್ಯ ಅತಿಥಿಗಳಾಗಿಯೂ, ಡಾ ನಿರಂಜನ್ ಆರಾದ್ಯರವರು ಮುಖ್ಯ ಸಮಾಲೋಚಕರಾಗಿಯೂ, ಶ್ರೀ ವಾಸುದೇವ ಶರ್ಮರವರು ಅತಿಥಿಯಾಗಿಯೂ ಅನೇಕ ಸಂಘಸಂಸ್ಥೆಗಳ ನಿರ್ದೇಶಕರು, ಪ್ರತಿನಿಧಿಗಳ ಸಮಾಲೋಚನೆಯಲ್ಲಿ ಸಲ್ಲಿಸಲಾಯಿತು. ಮುಂದಿನ ಅನುಷ್ಠಾನಕ್ಕಾಗಿ ಮತ್ತು ಅನುಸರಣೆಗಾಗಿ ರಾಜ್ಯಮಟ್ಟದ ಸಮಾಲೋಚನೆಯಲ್ಲಿ ಸೂಚಿಸಲ್ಪಟ್ಟಂತೆ ಆರ್‌ಟಿಇ ಪ್ರವರ್ತಕರು ಮತ್ತು ಅದರ ಅನುಷ್ಠಾನಕ್ಕಾಗಿ ಕಾರ್ಯಾಚರಿಸುತ್ತಿರುವ ಸಮಾನ ಮನಸ್ಕ ಸಂಘಸಂಸ್ಥೆಗಳನ್ನು ಪ್ರತೀ ಜಿಲ್ಲೆಯಲ್ಲೂ ಸೇರಿಸಿ ನೆಟ್‌ವರ್ಕ್‌ಗಳನ್ನು ಬೆಳೆಸಬೇಕು ಮತ್ತು ಪಡಿ ಯೋಜನೆಯು ಇದರ ಜವಾಬ್ದಾರಿಯನ್ನು ತೆಗೆದುಕೊಂಡು ರಾಜ್ಯಮಟ್ಟದ ಚಿಂತನೆ, ಯೋಜನೆಗಳಲ್ಲಿ ಜಿಲ್ಲಾ ಮಟ್ಟದ ಸದಸ್ಯರುಗಳನ್ನು ಸೇರಿ ಬಲಯುತವಾಗಿ ಆಂದೋಲನವನ್ನು ನಡೆಸಬೇಕು ಎಂಬದನ್ನು ನಿರ್ಣಯವಾಗಿ ತೆಗೆದುಕೊಳ್ಳುವಂತಾಯಿತು. ನಂತರ ಜಿಲ್ಲಾ ಮಟ್ಟಗಳಲ್ಲೂ ನೆಟ್‌ವರ್ಕ್‌ಗಳನ್ನು ಮಾಡುವುದರ ಮೂಲಕ ರಾಜ್ಯಾದ್ಯಂತ ಆರ್‌ಟಿಇ ಕಾಯಿದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಿಸುವಲ್ಲಿ ಮೇಲುಸ್ತುವಾರಿ ನಡೆಸಬೇಕು ಎಂಬದಾಗಿ ಯೋಚಿಸಲಾಗಿದೆ. ಮಕ್ಕಳು ಮಗುಸ್ನೇಹಿ ಶಾಲಾ ವಾತಾವರಣದಲ್ಲಿ ಮಗುಸ್ನೇಹಿ ಸಮಾಜದೊಂದಿಗೆ ಸಂತಸದಾಯಕವಾಗಿ ದೈಹಿಕ, ಮಾನಸಿಕ ಹಾಗೂ ಸಾಮಾಜಿಕವಾಗಿ ಸದೃಢರನ್ನಾಗಿ ಮಾಡುವುದು ಯೋಜನೆಯ ಆಶಯವಾಗಿದೆ. ಸಂಸ್ಥೆ ತಯಾರಿಸಿದ ಶಿಕ್ಷಣ ಹಕ್ಕು ಕಾಯಿದೆಯ ಉಲ್ಲೇಖಗಳನ್ನೊಳಗೊಂಡ ಮತ್ತು ಕಾಯಿದೆಯನ್ನು ಚಿತ್ರಗಳ ಮೂಲಕ ಸುಲಭವಾಗಿ ಅರ್ಥೈಸುವಂತೆ ತಯಾರಿಸಿದ ಪೋಸ್ಟರ್‌ಗಳನ್ನು ಅಂದೇ ಬಿಡುಗಡೆ ಮಾಡಿ ಎಲ್ಲಾ ಜಿಲ್ಲೆಗಳ ಕಾರ್ಯಕರ್ತರುಗಳಿಗೆ ಸಂಸ್ಥೆಗಳಿಗೆ ಜಾಗೃತಿ ಕಾರ್ಯಕ್ರಮದಡಿ ನೀಡಲಾಯಿತು.





# ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ 2012 ಮತ್ತು ಅದರ ತಿದ್ದುಪಡಿ 2019

## ಮಗು ಎಂದರೆ 18 ವರ್ಷದ ಒಳಗೆ ಬರುವ ವ್ಯಕ್ತಿ (ಹೆಣ್ಣು /ಗಂಡು)



| ಅಪರಾಧಗಳು | ಸರಳೀಕೃತ ವ್ಯಾಖ್ಯಾನ | ಶಿಕ್ಷೆ |
|---|---|---|
| 1. ಭೇದಕ ಲೈಂಗಿಕ/ಹಲ್ಲೆ ದೌರ್ಜನ್ಯ (ಸೆಕ್ಷನ್ 3) | ಯಾವುದೇ ಒಂದು ಮಗುವಿನ ಬಾಯಿ, ಯೋನಿ, ಗುದದ್ವಾರಕ್ಕೆ ಶಿಶ್ನ ಅಥವಾ ಯಾವುದೇ ಇತರ ವಸ್ತುಗಳನ್ನು ಅಥವಾ ದೇಹದ ಯಾವುದೇ ಭಾಗವನ್ನು ದುರುಪಯೋಗಪಡಿಸಿ, ತೂರಿಸುವಿಕೆಯನ್ನು ಸಾಧ್ಯ ಮಾಡಿದರೆ ಅದು "ಭೇದಕ ಲೈಂಗಿಕ ಹಲ್ಲೆ/ದೌರ್ಜನ್ಯ" ಎನಿಸಿಕೊಳ್ಳುತ್ತದೆ. | 10 ವರ್ಷಕ್ಕೆ ಕಡಿಮೆಯಲ್ಲದ ಆದರೆ ಶಿಕ್ಷೆಯನ್ನು ಜೀವಾವಧಿಗೂ ವಿಸ್ತರಿಸಬಹುದು ಮತ್ತು ದಂಡಕ್ಕೆ ಹೊಣೆಗಾರರರು. ಸೆಕ್ಷನ್ 4(1)(a) |
| 2. ತೀವ್ರ ಭೇದಕ ಲೈಂಗಿಕ ದೌರ್ಜನ್ಯ (ಸೆಕ್ಷನ್ 5) | ಭೇದಕ ಲೈಂಗಿಕ/ಹಲ್ಲೆ/ದೌರ್ಜನ್ಯ(ಸೆಕ್ಷನ್ 3) ಅಪರಾಧವನ್ನು ಅಧಿಕಾರದಲ್ಲಿರುವ ವ್ಯಕ್ತಿಗಳು, ನಂಬಿಗಸ್ಥ ವ್ಯಕ್ತಿಗಳು ಅಪರಾಧ ಎಸಗಿದರೆ ಅದನ್ನು ತೀವ್ರ ಭೇದಕ "ಲೈಂಗಿಕ ಆಕ್ರಮಣ" ಎನ್ನುವರು | 20 ವರ್ಷಕ್ಕೆ ಕಡಿಮೆಯಲ್ಲದ, ಆದರೆ ದಂಡದೊಂದಿಗೆ ಜೀವಾವಧಿಗೆ ವಿಸ್ತರಿಸಬಹುದು ಸೆಕ್ಷನ್ 6 (1) |
| 3. ಲೈಂಗಿಕ ದೌರ್ಜನ್ಯ (ಸೆಕ್ಷನ್ 7) | ಲೈಂಗಿಕ ಉದ್ದೇಶದಿಂದ ಯಾವುದೇ ವ್ಯಕ್ತಿಯು ಮಗುವಿನ ಯೋನಿ, ಶಿಶ್ನ, ಮೊಲೆಗಳನ್ನು ಸ್ಪರ್ಶಿಸುವುದು ಅಥವಾ ಮಕ್ಕಳಿಂದ ತನ್ನ ದೇಹದ ಭಾಗಗಳನ್ನು ಮುಟ್ಟಿಸಿಕೊಳ್ಳುವುದನ್ನು "ಲೈಂಗಿಕ ದೌರ್ಜನ್ಯ" ಎಂದು ಕರೆಯಲಾಗುವುದು. | 3 ವರ್ಷದಿಂದ 5 ವರ್ಷಕ್ಕೆ ಕಡಿಮೆಯಲ್ಲದ ದಂಡದೊಂದಿಗೆ (ಸೆಕ್ಷನ್ 8) |
| 4. ತೀವ್ರ ಲೈಂಗಿಕ ದೌರ್ಜನ್ಯ (ಸೆಕ್ಷನ್ 9) | ಯಾವುದೇ ವ್ಯಕ್ತಿ ಅಧಿಕಾರದ ಪ್ರಭಾವ ಬೀರಿ ಲೈಂಗಿಕ ದೌರ್ಜನ್ಯವೆಸಗಿದರೆ ಈ ಅಪರಾಧವು "ತೀವ್ರ ಲೈಂಗಿಕ ದೌರ್ಜನ್ಯ" ಎಂದು ಪರಿಗಣಿಸಲ್ಪಡುತ್ತದೆ. | 5 ವರ್ಷದಿಂದ 7 ವರ್ಷಕ್ಕೆ ದಂಡದೊಂದಿಗೆ (ಸೆಕ್ಷನ್ 10) |
| 5. ಲೈಂಗಿಕ ಕಿರುಕುಳ (ಸೆಕ್ಷನ್ 11) | ಲೈಂಗಿಕ ಉದ್ದೇಶದಿಂದ ಶಬ್ದ ಮಾಡುವ ಮೂಲಕ ಯಾವುದೇ ಮಗುವಿನ ಗಮನ ಸೆಳೆದರೆ, ಅಸಭ್ಯವಾಗಿ ವರ್ತಿಸಿದರೆ, ತನ್ನ ದೇಹ ಪ್ರದರ್ಶನ ಮಾಡಿದರೆ, ಮಗುವನ್ನು ನೇರವಾಗಿ ಅಥವಾ ವಿದ್ಯುನ್ಮಾನ ಮಾಧ್ಯಮದ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದರೆ ಅಥವಾ ಮಗುವಿಗೆ ಭಯ ಹುಟ್ಟಿಸಿದರೆ ಅದನ್ನು "ಲೈಂಗಿಕ ಕಿರುಕುಳ" ಎಂದು ಕರೆಯಲಾಗುವುದು. | 3 ವರ್ಷ ಜೈಲು ಶಿಕ್ಷೆ ದಂಡದೊಂದಿಗೆ (ಸೆಕ್ಷನ್ 12) |
| 6. ಮಕ್ಕಳನ್ನು ಅಶ್ಲೀಲ ಚಿತ್ರೀಕರಣಕ್ಕೆ ಬಳಸುವುದು ಸೆಕ್ಷನ್ 14(a)(1)(da) | ಮಗುವನ್ನು ಯಾವುದೇ ರೀತಿಯ ಅಶ್ಲೀಲ ಚಿತ್ರಗಳ ರಚನೆಗೆ ಬಳಸುವುದು, ಮಗುವಿನ ಅಶ್ಲೀಲ ಚಿತ್ರಗಳನ್ನು ಸಂಗ್ರಹಿಸುವುದು ಮತ್ತು ಮಾರುವುದು. | 5 ವರ್ಷಕ್ಕೆ ಕಡಿಮೆಯಲ್ಲದ ಜೈಲು ಮತ್ತು ದಂಡಕ್ಕೆ ಹೊಣೆಯಾಗುವರು. ಅಪರಾಧವು ಮರುಕಳಿಸಿದ ಪಕ್ಷದಲ್ಲಿ 7 ವರ್ಷಕ್ಕೆ ಕಡಿಮೆಯಲ್ಲದ ಜೈಲು ಮತ್ತು ದಂಡದ ಹೊಣೆ. ಸೆಕ್ಷನ್ 14 (1) |
| | ಯಾವುದೇ ವ್ಯಕ್ತಿಯು ಮಗು ಯಾ ಮಕ್ಕಳನ್ನು ಅಶ್ಲೀಲ ಚಿತ್ರಗಳ ಉದ್ದೇಶಕ್ಕಾಗಿ 14(1) ರ ಪ್ರಕಾರ ಸೆಕ್ಷನ್ 3 ಯಾ 5 ಯಾ 7 ಯಾ 9 ರಲ್ಲಿ ತಿಳಿಸಿದಂತೆ ಅಂತಹ ಅಪರಾದಗಳಲ್ಲಿ ಬಾಗಿಗಳಾಗುವುದು. | ಇವರು ಸೆಕ್ಷನ್ 4, ಸೆಕ್ಷನ್ 6, ಸೆಕ್ಷನ್ 8 ಮತ್ತು ಸೆಕ್ಷನ್ 10ರಂತೆ ಕ್ರಮವಾಗಿ ಮತ್ತು ಸೆಕ್ಷನ್ 14(1)ರ ಜೊತೆಗೆ ಶಿಕ್ಷಾರ್ಹರಾಗುತ್ತಾರೆ |
| 7. ಮಗುವಿನ ಅಶ್ಲೀಲ ಚಿತ್ರೀಕರಣದ ಪರಿಕರಗಳನ್ನು ಮಾಡುವುದು, ಇತರರಿಗೆ ಕಳುಹಿಸುವ ಉದ್ದೇಶದಿಂದ ಸಂಗ್ರಹಿಸಿಡುವುದು, ನಾಶಪಡಿಸದಿರುವುದು ಮತ್ತು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಈ ಕುರಿತಾಗಿ ತಿಳಿಸದಿರುವುದು.-ಸೆಕ್ಷನ್ 15 (1) | ಯಾವುದೇ ವ್ಯಕ್ತಿಯು ಮಕ್ಕಳ ಅಶ್ಲೀಲ ಚಿತ್ರಗಳನ್ನು ಸಂಗ್ರಹಿಸುವುದು, ಅವುಗಳನ್ನು ಹೊಂದಿರುವುದು. ಯಾವುದೇ ರೀತಿಯಲ್ಲಿ ಮಗುವನ್ನು ಅಶ್ಲೀಲವಾಗಿ ಬಳಸುವುದು, ಅವುಗಳನ್ನು ಅಳಿಸದಿರುವುದು ಮತ್ತು ನಾಶಪಡಿಸದಿರುವುದು ಅಥವಾ ಸಂಬಂಧಿಸಿದ ಪ್ರಾಧಿಕಾರಗಳಿಗೆ ತಿಳಿಸದಿರುವುದು<br>ಯಾವುದೇ ವ್ಯಕ್ತಿಯು ಮಕ್ಕಳ ಅಶ್ಲೀಲ ಚಿತ್ರಗಳನ್ನು ಸಂಗ್ರಹಿಸುವುದು, ಅವುಗಳನ್ನು ಹೊಂದಿರುವುದು. | ರೂ. 5000ಕ್ಕೆ ಕಡಿಮೆ ಇರದ ದಂಡ, 2ನೇ ಬಾರಿಯೂ ಅಪರಾಧವು ಮರುಕಳಿಸಿದರೆ ರೂ 10000ಕ್ಕೆ ಕಡಿಮೆ ಇರದ ದಂಡ |
| 8. ಮಗುವನ್ನು ಒಳಗೊಳ್ಳಿಸಿ, ಅಶ್ಲೀಲ ಚಿತ್ರೀಕರಣದ ಪರಿಕರಗಳನ್ನು ಮಾರುವುದು, ಹಂಚುವುದು 15(2) | ಯಾವುದೇ ರೀತಿಯಲ್ಲಿ ಪ್ರಸಾರಕ್ಕಾಗಿ ಮಗುವನ್ನು ಬಳಸುವುದು, ಅವುಗಳನ್ನು ಸಂಬಂಧಿಸಿದ ಪ್ರಾಧಿಕಾರಗಳಿಗೆ ವರದಿಗಾಗಿ ಮತ್ತು ನ್ಯಾಯಾಲಯದಲ್ಲಿ ಸಾಕ್ಷ್ಯಕ್ಕಾಗಿ ಹೊರತುಪಡಿಸಿ ಇತರರಿಗೆ ಹಂಚುವುದು.<br>ಯಾವುದೇ ವ್ಯಕ್ತಿಯು ಮಕ್ಕಳ ಅಶ್ಲೀಲ ಚಿತ್ರಗಳನ್ನು ಸಂಗ್ರಹಿಸುವುದು, ಅವುಗಳನ್ನು ಹೊಂದಿರುವುದು. | 3 ವರ್ಷಕ್ಕೆ ಕಡಿಮೆಯಲ್ಲದ ಜೈಲು ಮತ್ತು ದಂಡದೊಂದಿಗೆ ಅಥವಾ ಎರಡನ್ನೂ ಸೇರಿಸಿ ಶಿಕ್ಷೆ |
| 9. ಮಗುವನ್ನು ಉಪಯೋಗಿಸಿ ಅಶ್ಲೀಲ ಪರಿಕರಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುವುದು15(3) | ಯಾವುದೇ ರೀತಿಯಲ್ಲಿ ವಾಣಿಜ್ಯ ಉದ್ದೇಶಗಳಿಗೆ ಬಳಸುವುದು<br>ಯಾವುದೇ ವ್ಯಕ್ತಿಯನ್ನು ಅಪರಾಧ ಮಾಡುವಂತೆ ಪ್ರಚೋದಿಸುವುದು, ಕುಮ್ಮಕ್ಕು ನೀಡುವುದು, | ಮೊದಲ ಬಾರಿಯ ಅಪರಾಧವಾದಲ್ಲಿ 3 ವರ್ಷಕ್ಕೆ ಕಡಿಮೆಯಲ್ಲದ 5 ವರ್ಷಕ್ಕೆ ವಿಸ್ತರಿಸಬಹುದಾದ ಜೈಲು ಅಥವಾ ದಂಡ ಅಥವಾ ಈ ಎರಡೂ ಶಿಕ್ಷೆಗಳನ್ನು ಒಟ್ಟಾಗಿ ನೀಡುವುದು, ಅಪರಾಧವು ಮರುಕಳಿಸಿದರೆ 5 ವರ್ಷಕ್ಕೆ ಕಡಿಮೆಯಲ್ಲದ ಮತ್ತು 7 ವರ್ಷಕ್ಕೆ ವಿಸ್ತರಿಸಬಹುದಾದ ಜೈಲು ಮತ್ತು ದಂಡ |
| 10. ಪ್ರಚೋದನೆ, ಅಪರಾಧವೆಸಗಲು ನೆರವು (ಸೆಕ್ಷನ್ 16) | ಅಥವಾ ಅಪರಾಧವೆಸಗಲು ನೆರವು ನೀಡುವ ವ್ಯಕ್ತಿ ಇತರರೊಂದಿಗೆ ಸೇರಿ ಪಿತೂರಿ ನಡೆಸುವುದು. | ಸೆಕ್ಷನ್ 17ರ ಪ್ರಕಾರ ಶಿಕ್ಷೆ ನೀಡಲಾಗುವುದು |
| 11. ಅಪರಾಧ ನಡೆಸಲು ಪ್ರಯತ್ನ ಸೆಕ್ಷನ್ 17 | ಯಾವುದೇ ವ್ಯಕ್ತಿ ಅಪರಾಧವನ್ನು ಮಾಡಲು ಪ್ರಯತ್ನಿಸುವುದು (ಸೆಕ್ಷನ್ 18ರಲ್ಲಿ ವಿವರಿಸಿದಂತೆ) | ಯಾವುದೇ ಅವಧಿಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ನಿಗದಿತ ಜೀವಾವಧಿ ಶಿಕ್ಷೆ ಅಥವಾ ದಂಡ ಅಥವಾ ಜೈಲು ಮತ್ತು ದಂಡದೊಂದಿಗೆ ಶಿಕ್ಷೆ |

ವಾರೆಂಟ್ ಇಲ್ಲದೆ ಬಂಧನ

ಸೂಚನೆ : ಇಲ್ಲಿ ನೀಡಿರುವ ಮಾಹಿತಿಯು ಮೇಲ್ನೋಟ ಸಾರಾಂಶವಾಗಿದ್ದು, ಕಾನೂನಿನ ಸೂಕ್ತ ಬಳಕೆಗಾಗಿ ಮೂಲ ಗಜೆಟ್ ಪ್ರಕಟಿತ ಮಕ್ಕಳ ಮೇಲಿನ ಲೈಂಗಿಕ ಅಪರಾಧ ರಕ್ಷಣಾ ಕಾಯಿದೆ 2012 ಮತ್ತು ತಿದ್ದುಪಡಿ 2019ನ್ನು ಬಳಸಬೇಕಾಗಿ ವಿನಂತಿ


ಶಾಲೆಯಲ್ಲಿ ಕಾರ್ಯನಿರ್ವಹಣೆಯ
ಮೇಲ್ವಿಚಾರಣೆಗಾಗಿ ನಿಯಮಿತವಾಗಿ
ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ
ಮಾಸಿಕ ಸಭೆಗಳನ್ನು ನಡೆಸುವುದು.
ಶಾಲಾ ಎಸ್ ಡಿ ಎಂ ಸಿ
ಮಾಸಿಕ ಸಭೆ


...ಪ್ರತಿಯೊಂದು ತರಗತಿಗೂ ಅಗತ್ಯವಿರುವಷ್ಟು ಆಟದ ಸಾಮಗ್ರಿ, ಆಟಗಳು ಮತ್ತು ಕ್ರೀಡಾ ಉಪಕರಣಗಳು ಹಾಗೂ ಶಾಲೆಗೆ ಸುಸಜ್ಜಿತ ಆಟದ ಮೈದಾನ, ಶಾಲಾ ಕಟ್ಟಡವನ್ನು ಸುರಕ್ಷಿತವಾಗಿಡಲು ಸುತ್ತಲೂ ಗಡಿ ಗೋಡೆ/ಕಂಪೌಂಡು ಇರತಕ್ಕದ್ದು...
–ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯಿದೆ, 2009 – ಅನುಸೂಚಿ 7, 2(vi),(vii)
ಶಿಕ್ಷಣ ಹಕ್ಕು ಮಕ್ಕಳ ಹಕ್ಕು
and sports equipments shall be prov
The school building must be secured
d with a boundary wall or a fence...
Compulsary Education Act, 2009. Schedule


ಶಿಕ್ಷಣ ಹಕ್ಕು ಕಾಯಿದೆ (ಆರ್‌ಟಿಇ) 2009 ಅನುಷ್ಠಾನಕ್ಕಾಗಿನೆಟ್‌ವರ್ಕ್‌ಗಳ ಪಾತ್ರ
ಕುರಿತು
ಕರ್ನಾಟಕ ವಿಭಾಗೀಯಮಟ್ಟದಲ್ಲಿ
ಸಮಾಲೋಚನಾಕಾರ್ಯಾಗಾರದ
ಪೂರ್ವಭಾವಿ ವೆಬಿನಾರ್ ಸಭೆ
ದಿನಾಂಕ: 27-02-2021
ಸಮಯ: ಬೆಳಿಗ್ಗೆ 10.30 AM
ವೆಬಿನಾರ್ ಲಿಂಕ್:
ಕುಡಿಯುವ ನೀರು


ಇಂದ ಬೆಟ್ಟು ಗ್ರಾಮ ಪಂಚಾಯತ್, ಬೆಳ್ತಂಗಡಿ
ಇವರ ಸಂಯುಕ್ತ ಆಶ್ರಯದಲ್ಲಿ
'ಸ್ಥಳೀಯ ಸರಕಾರದ ಆಡಳಿತದಲ್ಲಿ ಮಕ್ಕಳು'
ಗ್ರಾಮ ಪಂಚಾಯತ್ ಚುನಾಯಿತ
ಸದಸ್ಯರಿಗಾಗಿ ತರಬೇತಿ ಕಾರ್ಯಾಗಾರ
18-03-2021


ಕೋವಿಡ್–19 ಸಂದರ್ಭದಲ್ಲಿ ಶಿಕ್ಷಣ ಹಕ್ಕು
ಕಾಯಿದೆ 2009ರ ಅನುಷ್ಠಾನದಲ್ಲಿ
ನೆಟ್‌ವರ್ಕ್‌ಗಳ ಜವಾಬ್ದಾರಿ ಕುರಿತು
ರಾಜ್ಯಮಟ್ಟದ ಸಮಾಲೋಚನ ಕಾರ್ಯಾಗಾರ
ಸಂಘಟಕರು : ಪಡಿ ಸಂಸ್ಥೆ ಮಂಗಳೂರು
ದಿನಾಂಕ : 19–12–2020
ಸಮಯ: ಬೆಳಿಗ್ಗೆ: 10:00 ಗಂಟೆಗೆ
ಸ್ಥಳ :ಎಸ್.ಸಿ.ಎಮ್ ಹೌಸ್, ಮಿಷನ್ ರೋಡ್, ಬೆಂಗಳೂರು


ಪಡಿ ಸಂಸ್ಥೆ, ಮಂಗಳೂರು
ಗ್ರಾಮ ಪಂಚಾಯತ್ ಕೋಣಿ, ಕುಂದಾಪುರ
ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ ರಿ. ಉಡುಪಿ
ಇವರ ಸಂಯುಕ್ತ ಆಶ್ರಯದಲ್ಲಿ
ಸ್ಥಳೀಯ ಸರಕಾರ ಮತ್ತು ಶಿಕ್ಷಣ ಹಕ್ಕು ಕಾಯ್ದೆ 2009
"ಸ್ಥಳೀಯ ಸರಕಾರದ ಆಡಳಿತದಲ್ಲಿ ಮಕ್ಕಳು"
ಗ್ರಾಮ ಪಂಚಾಯತ್ ಚುನಾಯಿತ ಸದಸ್ಯರಿಗೆ ತರಬೇತಿ ಕಾರ್ಯಾಗಾರ
ದಿನಾಂಕ: 22–03–2021
ಸಮಯ: ಮಧ್ಯಾಹ್ನ 12:00 ಗಂಟೆಗೆ
ಸ್ಥಳ: ಗ್ರಾಮ ಪಂಚಾಯತ್ ಸಭಾಭವನ ಕೋಣಿ, ಕುಂದಾಪುರ
ಶಿಕ್ಷಣ ಹಕ್ಕು – ಮಕ್ಕಳ ಹಕ್ಕು


Project: Quality Education in Government Primary Schools
Organise
WORKSHOP ON
RESOURCE DEVELOPMENT FORADVOCACY
& COMMUNITY OWNERSHIP
'ಜನ ಸಮುದಾಯದ ಧ್ವನಿಗಾಗಿ ವಕೀಲಿ ಕ್ರಮಗಳು'
ಸ್ಥಳ : ಐ.ಎಸ್.ಡಿ., ನಂತೂರು, ಮಂಗಳೂರು









